Language and Literacy

TESS India

# Speaking and listening

## ಮಾತನಾಡುವಿಕೆ ಮತ್ತು ಆಲಿಸುವಿಕೆ





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

## ಮಾತನಾಡುವಿಕೆ ಮತ್ತು ಆಲಿಸುವಿಕೆ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾ OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು 'ವಿದ್ಯಾರ್ಥಿ'ಗಳೆಂದು ಪರಿಗಣಿಸಿ ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ -ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0* LL03TESSKNV1
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲಿ ಏನಿದೆ?

ಈ ಘಟಕವು ಅರ್ಥಪೂರ್ಣವಾದ ಮಾತನಾಡುವ ಮತ್ತು ಆಲಿಸುವ ಅವಕಾಶಗಳು ಾವ ರೀತಿಯಲ್ಲಿ ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಗೆ ನೆರವಾಗಲಿದೆ ಎಂದು ಗಮನ ಹರಿಸುತ್ತದೆ.

ನಿಮ್ಮ ವಿದ್ಯಾರ್ಥಿಗಳ ಮಾತನಾಡುವ ಮತ್ತು ಆಲಿಸುವ ಕೌಶಲಗಳನ್ನು ಬೆಳೆಸಲು ನೀವು ಹಲವಾರು ಚಟುವಟಿಕೆಗಳನ್ನು ಯೋಜಿಸಿ ಮೌಲ್ಯಮಾಪನ ಮಾಡುವಿರಿ. ನಿಮ್ಮ ವಿದ್ಯಾರ್ಥಿಗಳ ಮಾತುಗಳನ್ನು ನೀವು ಕೇಳಿಸಿಕೊಳ್ಳುವುದರಿಂದ ಅವರ ಕಲಿಕೆಯ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯುವ ಹಾಗೂ ಆ ಮೂಲಕ ನಿಮ್ಮ ಮುಂದಿನ ಪಾಠಗಳನ್ನು ಯೋಜಿಸಲು ಬೇಕಾದ ಕ್ರಮಗಳನ್ನು ಕೂಡ ಪರಿಗಣಿಸುವರಿ.

## ಈ ಘಟಕದಲ್ಲಿ ನೀವೇನು ಕಲಿಯುವಿರಿ?

- ತರಗತಿಯಲ್ಲಿ ವಿದ್ಯಾರ್ಥಿಯ ಮಾತಿನ ಮಹತ್ವ.
- ಮಾತನಾಡುವ ಮತ್ತು ಆಲಿಸುವ ಚಟುವಟಿಕೆಗಳಿಗೆ ಆಧಾರವಾಗಿ ಚಿತ್ರಗಳನ್ನು ಬಳಸುವ ರೀತಿ.
- ವಿದ್ಯಾರ್ಥಿ ಮಾತನ್ನು, ಅವರ ತಿಳುವಳಿಕೆ ಮತ್ತು ಪ್ರಗತಿಯನ್ನು ಮೌಲ್ಯಮಾಪನ ಮಾಡುವ ಒಂದು ಕ್ರಮವಾಗಿ ಬಳಸುವುದಕ್ಕಾಗಿ ನಿಮ್ಮ ಬೋಧನಾ ಯೋಜನೆಗಳನ್ನು ಮಾರ್ಪಡಿಸಿಕೊಳ್ಳುವ ರೀತಿ.

## ಈ ಮಾರ್ಗ ಏಕೆ ಮುಖ್ಯ?

ಎಲ್ಲ ಪಠ್ಯಕ್ರಮ ಕ್ಷೇತ್ರಗಳಲ್ಲಿ ಬೋಧನೆ ಮತ್ತು ಕಲಿಕೆಗೆ ಮಾತನಾಡುವುದು ಮತ್ತು ಆಲಿಸುವುದು ಪ್ರಮುಖವಾದುದು. ಮಾತು ಸಾಕ್ಷರತೆಯ ಬುನಾದಿ ಕೂಡ. ಓದಲು ಅಥವಾ ಬರೆಯಲು ಕಲಿಯುವ ಸಾಕಷ್ಟು ಮುಂಚಿತವಾಗಿಯೇ ಮಕ್ಕಳು ಆಲಿಸುತ್ತಾರೆ ಮತ್ತು ಮಾತನಾಡುತ್ತಾರೆ. ಅವರು ತಮ್ಮ ಅಗತ್ಯ ಮತ್ತು ಬಯಕೆಗಳನ್ನು ವ್ಯಕ್ತಪಡಿಸಲು, ವಸ್ತುಗಳ ಬಗ್ಗೆ ತಿಳಿಯಲು ಹಾಗೂ ಕಲ್ಪನಾತ್ಮಕ, ಶೋಧನಾತ್ಮಕ ಆಟದಲ್ಲಿ ತೊಡಗಲು ಮಾತನ್ನು ಬಳಸಬಹುದೆಂದು ತಿಳಿಯುತ್ತಾರೆ. ಮಕ್ಕಳು ತಮ್ಮ ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳುವುದಕ್ಕಾಗಿ ವಿವಿಧ ಸನ್ನಿವೇಶಗಳಲ್ಲಿನ ವಿವಿಧ ವಿಷಯಗಳ ಕುರಿತು ಆಲಿಸಿಕೊಳ್ಳುವ ಹಾಗೂ ಅವುಗಳ ಕುರಿತು ಮಾತನಾಡುವ ಅವಕಾಶಗಳ ಅಗತ್ಯವಿದೆ. ಈ ಮೂಲಕ ಅವರ ಶಾಲಾ ಸಾಧನೆಯನ್ನು ಉತ್ತಮಪಡಿಸಬಹುದು.

## 1. ಮಾತನಾಡುವುದು ಮತ್ತು ಕಲಿಕೆ

ಸಾಂಪ್ರದಾಯಿಕ ತರಗತಿಗಳಲ್ಲಿ, ಸಾಮಾನ್ಯವಾಗಿ ಶಿಕ್ಷಕರ ಮಾತೇ ಹೆಚ್ಚು. ಆದರೆ, ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಮಾತಿನ ಮೂಲಕ ಅವರನ್ನು ಸಕ್ರಿಯವಾಗಿ ತೊಡಗಿಸಿದಾಗ, ಕಲಿಕೆ ಕುರಿತ ಅವರ ಮನೋಭಾವ, ಕಲಿಕೆ ಫಲಗಳು ಗಣನೀಯವಾಗಿ ಸುಧಾರಿಸುತ್ತದೆ.

**ಚಿಂತನೆಗೊಂದು ಕ್ಷಣ**

- ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸುವುದು ಎಂದರೆ ಏನು ಎಂದು ನೀವು ಯೋಚಿಸುವಿರಿ? ಅದು ಕೇವಲ ಶಿಕ್ಷಕರ ಪ್ರಶ್ನೆಗಳನ್ನು ಉತ್ತರಿಸುವುದಷ್ಟೆಯೇ ಅಥವಾ ಅದಕ್ಕಿಂತ ಹೆಚ್ಚಿನದೇ?
- ತರಗತಿ ಕಲಿಕೆಯಲ್ಲಿ ನಿಮ್ಮ ವಿದ್ಯಾರ್ಥಿಗಳು 'ಸಕ್ರಿಯವಾಗಿ ತೊಡಗಿದ್ದಾರೆಯೇ ಇಲ್ಲವೇ' ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ?

ಕಲಿಕೆ ವ್ಯಕ್ತಿಯ ಈಗಿನ ಜ್ಞಾನ, ಕೌಶಲಗಳು ಮತ್ತು ಅನುಭವಗಳಿಗೆ ಹೊಸದನ್ನು ಸೇರಿಸಿ, ಹೊಸ ದೃಷ್ಟಿ ಕೋನವನ್ನು ಪಡೆಯುವುದನ್ನು ಒಳಗೊಂಡಿದೆ. ಈ ಪ್ರಕ್ರಿಯೆಯಲ್ಲಿ ಮಾತು ಪ್ರಮುಖ ಪಾತ್ರವಹಿಸುತ್ತದೆ. ಏಕೆಂದರೆ ಅದು ವಿದ್ಯಾರ್ಥಿಗಳು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಲು, ಅವರಿಗೆ ಯಾವುದು ಸ್ಪಷ್ಟವಾಗಿಲ್ಲವೋ ಎಂದು ಹೇಳಲು, ಪ್ರಶ್ನೆಗಳನ್ನು ಕೇಳಲು, ಹೊಸ ಹೊಳಹು (idea)ಗಳನ್ನು ಕಂಡುಕೊಳ್ಳಲು ಹಾಗೂ ತಮ್ಮ ಶಿಕ್ಷಕರು ಮತ್ತು ಸಹಪಾಠಿಗಳೊಂದಿಗೆ ಪರಸ್ಪರ ವಿನಿಮಯಮಾಡಿಕೊಂಡು ಕಲಿಯಲು ನೆರವಾಗುತ್ತದೆ.

ಈ ಮೊದಲ ಚಟುವಟಿಕೆಯಲ್ಲಿ, ಕಲಿಕೆಗಾಗಿ ಮಾತಿನ ಮೌಲ್ಯದ ಕುರಿತು ನೀವು ಆಲೋಚಿಸುವಿರಿ

### ಚಟುವಟಿಕೆ 1: ಕಲಿಕೆಗಾಗಿ ಮಾತು

ಸಾಧ್ಯವಾದಲ್ಲಿ, ನಿಮ್ಮ ಸಹೋದ್ಯೋಗಿಯೊಂದಿಗೆ ಈ ಚಟುವಟಿಕೆ ಮಾಡಿ. ಮೊದಲಿಗೆ, ಸಂಪನ್ಮೂಲ 1, 'ಕಲಿಕೆಗಾಗಿ ಮಾತು' ಓದಿ. ಓದಿದ ಮೇಲೆ, ಈ ಕೆಳಗಿನ ಎರಡು ಆಯ್ದ ಭಾಗಗಳನ್ನು ಎಚ್ಚರಿಕೆಯಿಂದ ಓದಿ:

- ವಿದ್ಯಾರ್ಥಿಗಳ ಕಾರ್ಯವನ್ನು ಸಂತೋಷದಾಯಕವಾಗಿರುವಂತೆ ಹಾಗೂ ಅವರ ಪೂರ್ವ ಅನುಭವಗಳ ಆಧಾರದ ಮೇಲೆ ಯೋಜಿಸಿದಲ್ಲಿ, ಸೀಮಿತ ಸಾಕ್ಷರತೆ ಮತ್ತು ಸಂಖ್ಯಾ ಕೌಶಲ ಹೊಂದಿರುವ ಕಿರಿಯ ವಿದ್ಯಾರ್ಥಿಗಳು ಕೂಡ ಉನ್ನತ ಆಲೋಚನಾ ಕೌಶಲಗಳನ್ನು ಪ್ರದರ್ಶಿಸಲ್ಲರು. ಉದಾಹರಣೆಗೆ, ವಿದ್ಯಾರ್ಥಿಗಳು ಒಂದು ಕಥೆ, ಚಿತ್ರಗಳಲ್ಲಿನ ಒಂದು ಪ್ರಾಣಿ ಅಥವಾ ಆಕೃತಿ, ರೇಖಾಕೃತಿ ಅಥವಾ ನೈಜ ವಸ್ತುಗಳ ಕುರಿತು ಊಹಿಸಬಲ್ಲರು. ವಿದ್ಯಾರ್ಥಿಗಳು ಪಾತ್ರಾಭಿನಯದಲ್ಲಿನ ಒಂದು ಪಾತ್ರ ಅಥವಾ ಸೂತ್ರದ ಗೊಂಬೆಯ ಕುರಿತ ಸಮಸ್ಯೆಗಳಿಗೆ ಸಾಧ್ಯವಿರುವ ಪರಿಹಾರಗಳನ್ನು ಹಾಗೂ ಸಲಹೆಗಳನ್ನು ಪಟ್ಟಿಮಾಡಬಲ್ಲರು.
- ವಿದ್ಯಾರ್ಥಿಗಳು ಏನನ್ನು ಕಲಿಯಬೇಕು ಮತ್ತು ಯಾವುದರ ಬಗ್ಗೆ ಆಲೋಚಿಸಬೇಕು, ಹಾಗೆಯೇ ವಿದ್ಯಾರ್ಥಿಗಳು ಯಾವ ಬಗೆಯ ಮಾತನ್ನು ಬೆಳೆಸಿಕೊಳ್ಳಬೇಕು ಎಂಬುದರ ಕುರಿತು ನೀವು ಪಾಠವನ್ನು ಯೋಜಿಸಿ.

### ಚಿಂತನೆಗೊಂದು ಕ್ಷಣ

ಸಂಪನ್ಮೂಲ – 1 ಚಿತ್ರಗಳು, ರೇಖಾಕೃತಿಗಳು ಅಥವಾ ನೈಜ ವಸ್ತುಗಳನ್ನು ಬಳಸಿ ವಿದ್ಯಾರ್ಥಿಗಳು ಒಂದು ಕಥೆ, ಪ್ರಾಣಿ ಅಥವಾ ಆಕೃತಿಯನ್ನು ಊಹಿಸಬಹುದು ಎಂದು ಸಲಹೆಮಾಡುತ್ತದೆ. ಅಲ್ಲದೆ ಅವರು ಪಾತ್ರಾಭಿನಯದಲ್ಲಿನ ಒಂದು ಪಾತ್ರ ಅಥವಾ ಸೂತ್ರದ ಗೊಂಬೆಯ ಕುರಿತ ಸಮಸ್ಯೆಗಳಿಗೆ ಸಾಧ್ಯವಿರುವ ಪರಿಹಾರಗಳನ್ನು ಹಾಗೂ ಸಲಹೆಗಳನ್ನು ನೀಡಬಹುದು ಎಂದು ತಿಳಿಸುತ್ತದೆ.

- ಈ ಹೊಳಹು (idea)ಗಳನ್ನು ಹೇಗೆ ಎರಡನೇ ತರಗತಿಯಲ್ಲಿ ಅನ್ವಯಿಸುಬಹುದು ಎಂದು ಒಂದು ಉದಾಹರಣೆಯನ್ನು ಆಲೋಚಿಸಿ. ಯಾವ ಸಂಪನ್ಮೂಲ, ವಿಷಯವಸ್ತು ಅಥವಾ ಚಟುವಟಿಕೆಗಳನ್ನು ನೀವು ಬಳಸುತ್ತೀರಿ?
- ಈ ಹೊಳಹು (idea)ಗಳನ್ನು ಹೇಗೆ ಏಳನೇ ತರಗತಿಯಲ್ಲಿ ಅನ್ವಯಿಸಬಹುದು ಎಂದು ಒಂದು ಉದಾಹರಣೆಯನ್ನು ಆಲೋಚಿಸಿ. ಯಾವ ಸಂಪನ್ಮೂಲ, ವಿಷಯವಸ್ತು ಅಥವಾ ಚಟುವಟಿಕೆಗಳು ಸೂಕ್ತವಾಗಿರುತ್ತವೆ?

ಪ್ರಶ್ನೆಗಳನ್ನು ಗಮನಿಸಿ: ಮುಂದೆ ಏನಾಗಲಿದೆ? ಇದನ್ನು ಈ ಮುಂಚೆ ನಾವು ನೋಡಿದ್ದೇವೆಯೇ? ಇದು ಏನಾಗಿರಬಹುದು? ನೀವು ಹಾಗೇಕೆ ಯೋಚಿಸುತ್ತೀರಿ?

- ಒಂದನೇ ತರಗತಿಯಲ್ಲಿ ನೀವು ಈ ಪ್ರಶ್ನೆಗಳನ್ನು ಕೇಳುವಂತಹ ಕೆಲವು ಚಟುವಟಿಕೆಗಳನ್ನು ಆಲೋಚಿಸಿ.
- ಆರನೇ ತರಗತಿಯಲ್ಲಿ ನೀವು ಈ ಪ್ರಶ್ನೆಗಳನ್ನು ಕೇಳುವಂತಹ ಕೆಲವು ಚಟುವಟಿಕೆಗಳನ್ನು ಆಲೋಚಿಸಿ.

ಈಗ ನಿಮ್ಮ ಇತ್ತೀಚಿನ ಪಾಠಗಳನ್ನು ಕುರಿತು ಆಲೋಚಿಸಿ. ನಿಮ್ಮ ವಿದ್ಯಾರ್ಥಿಗಳು ವೈಚಾರಿಕ ಮಾತುಗಳನ್ನಾಡಿದ ಸಂದರ್ಭಗಳನ್ನು ಗುರುತಿಸಲು ಸಾಧ್ಯವೇ?

ಈ ಬಗೆಯ ಮಾತು ಯಾವ ವಿಷಯ ಅಥವಾ ವಿಷಯವಸ್ತುವಿಗೆ ಸಂಬಂಧಿಸಿತ್ತು? ಕಲಿಕೆಗಾಗಿ ಮಾತು ಎಲ್ಲಾ ವಯಸ್ಸಿನ ವಿದ್ಯಾರ್ಥಿಗಳಿಗೆ ತುಂಬಾ ಮೌಲ್ಯಭರಿತವಾದುದು. ವಿದ್ಯಾರ್ಥಿಗಳಿಗೆ ಉದ್ದೇಶಪೂರ್ವಕವಾಗಿ ಮಾತನಾಡಲು ಹೆಚ್ಚಿನ ಅವಕಾಶಗಳನ್ನು ಕೊಟ್ಟಲ್ಲಿ, ಅವರು ಆಲೋಚನಾತ್ಮಕವಾಗಿ ಆಲಿಸಲು ಮತ್ತು ಮಾತನಾಡಲು ಹೆಚ್ಚಿನ ಕೌಶಲಗಳಿಸುವರು.

**ವಿಡಿಯೊ**: Talk for learning

## 2. ವಿದ್ಯಾರ್ಥಿ ಮಾತಿಗೆ ಪ್ರೋತ್ಸಾಹಕವಾಗಿ ಚಿತ್ರಗಳನ್ನು ಬಳಸುವುದು.

ಪ್ರಸಂಗ ಅಧ್ಯಯನ 1 ಓದಿ. ಇದು ಒಂದನೇ ತರಗತಿ ಶಿಕ್ಷಕಿ ತನ್ನ ವಿದ್ಯಾರ್ಥಿಗಳಿಗೆ ಗೊತ್ತಿರುವುದನ್ನು ಮಾತನಾಡುವಂತೆ ಪ್ರೋತ್ಸಾಹಿಸಲು ಹೇಗೆ ಚಿತ್ರಗಳನ್ನು ಬಳಸುತ್ತಾರೆ ಎಂದು ವಿವರಿಸುತ್ತದೆ.

### ಪ್ರಸಂಗ ಅಧ್ಯಯನ 1: ತರಗತಿ ಸಂಭಾಷಣೆಯನ್ನು ಉತ್ತೇಜಿಸಲು ಚಿತ್ರಗಳನ್ನು ಬಳಸುವುದು

ಪ್ರಿಯಾ ಮೈಸೂರು ಜಿಲ್ಲೆಯ ಒಂದು ಹಳ್ಳಿಯ ಶಾಲೆಯಲ್ಲಿ ಒಂದನೇ ತರಗತಿಯ ಶಿಕ್ಷಿಕಿಯಾಗಿದ್ದಾರೆ. ಇಲ್ಲಿ ಅವರು ತಮ್ಮ ತರಗತಿ ಸಂಭಾಷಣೆಗೆ ಬೇಕಾದ ಪರಿಚಿತ ದೃಶ್ಯವಿರುವ ಚಿತ್ರಗಳನ್ನು ಬಳಸುವ ರೀತಿಯನ್ನು ಹೇಳಿಕೊಂಡಿದ್ದಾರೆ.

ನಾನು ನನ್ನ ವಿದ್ಯಾರ್ಥಿಗಳನ್ನು ಮಾತನಾಡುವಂತೆ ಪ್ರೋತ್ಸಾಹಿಸಲು ಚಿತ್ರಗಳನ್ನು (ಚಿತ್ರ1 ನ್ನು ನೋಡಿ) ಬಳಸುತ್ತೇನೆ. ಸ್ಥಳೀಯ ಚಿತ್ರಕಾರರಿಂದ ರಚಿತವಾದ ಚಿತ್ರಗಳನ್ನು ಬಾಳಿಕೆ ಬರುವ ದೊಡ್ಡ ಪೇಪರ್ ಗಳ ಮೇಲೆ ಮುದ್ರಿಸಿ, ತೆಳುವಾದ ಪಾರದರ್ಶಕ ಪ್ಲಾಸ್ಟಿಕ್ ಪೇಪರ್ ನಿಂದ ಹೊದಿಸಲಾಗಿದೆ. ಮೊದಲ ಚಿತ್ರದ ಹೆಸರು 'ನನ್ನ ಹಳ್ಳಿ' ಹಾಗು ಎರಡನೆಯದು 'ಕೃಷಿ'.




ಚಿತ್ರ 1: ನನ್ನ ಹಳ್ಳಿ



ಕೃಷಿ

ಮೊದಲು ನಾನು ಚಿತ್ರಗಳನ್ನು ಗೋಡೆಗೆ ನೇತುಹಾಕುತ್ತೇನೆ. ಅವುಗಳ ಹೆಸರು ಹೇಳುವುದಿಲ್ಲ, ಆದರೆ ನನ್ನ ವಿದ್ಯಾರ್ಥಿಗಳು ತಮಗೆ ಬೇಕಾದ ಸಮಯದಲ್ಲಿ ಅವುಗಳನ್ನು ಗಮನಿಸಿ, ಪರಿಶೀಲಿಸಲು ಅವಕಾಶಮಾಡಿಕೊಡುತ್ತೇನೆ. ಮುಂದಿನ ಒಂದೆರಡು ದಿನಗಳಲ್ಲಿ ಅವರು ಚಿತ್ರದ ಕುರಿತು ಪರಸ್ಪರ ಮಾತನಾಡಿಕೊಳ್ಳುವುದನ್ನು ಹಾಗೂ ಅದರಲ್ಲಿನ ವಿವರಗಳನ್ನು ಚರ್ಚಿಸುವುದನ್ನು ಗಮನಿಸುತ್ತೇನೆ.

ಆಮೇಲೆ, ನಾನು ಪ್ರತಿದಿನ ಒಂದು ಗುಂಪಿನ ವಿದ್ಯಾರ್ಥಿಗಳೊಂದಿಗೆ ಈ ಎರಡು ಚಿತ್ರಗಳ ಕುರಿತು 20 ನಿಮಿಷ ಅವಧಿಯ ಚರ್ಚೆಯನ್ನು ಏರ್ಪಡಿಸುತ್ತೇನೆ. ಕೆಲವೊಮ್ಮೆ ಆ ಗುಂಪನ್ನು ನಾನು ತರಗತಿಯ ಹೊರಗೆ ಕರೆದೊಯ್ಯುತ್ತೇನೆ. ಅದೇ ಸಮಯದಲ್ಲಿ ತರಗತಿಯಲ್ಲಿ ಉಳಿದ ವಿದ್ಯಾರ್ಥಿಗಳಿಗೆ ಬೇರೆ ಕೆಲಸ ಕೊಟ್ಟಿರುತ್ತೇನೆ.

ನಾನು ಮುಂಚಿತವಾಗಿಯೇ ಹಲವು ಪ್ರಶ್ನೆಗಳನ್ನು ಪಟ್ಟಿಮಾಡಿಕೊಳ್ಳುತ್ತೇನೆ. ಕೆಲವು ಪ್ರಶ್ನೆಗಳು ಸರಳ ವಿವರಣೆಯನ್ನು ಪಡೆಯುವ ಉದ್ದೇಶವನ್ನು ಹೊಂದಿದ್ದರೆ, ಇನ್ನು ಕೆಲವು ಕಾರಣೀಕರಿಸುವ, ಊಹಿಸುವ ಹಾಗೂ ವಿದ್ಯಾರ್ಥಿಗಳು ತಮ್ಮ ಅನುಭವಕ್ಕೆ ಸಂಬಂಧ ಕಲ್ಪಿಸಿಕೊಳ್ಳುವಂತಹ ಶೋಧನಾತ್ಮಕ ಮಾತನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿರುತ್ತವೆ. ಕೆಳಗೆ ಕೆಲವು ಉದಾಹರಣೆಗಳಿವೆ.

- ಇದು ಯಾವ ಚಿತ್ರ?
- ಚಿತ್ರದಲ್ಲಿ ನಿನಗೆ ಕಾಣುವುದನ್ನು ವಿವರಿಸುವೆಯಾ?

- ಜನರು ಏನು ಮಾಡುತ್ತಿದ್ದಾರೆ?
- ಈ ಆಟಗಳನ್ನು ನೀನು ಯಾವಾಗಲಾದರೂ ಆಡಿದ್ದೀಯಾ? ಇವುಗಳನ್ನು ಹೇಗೆ ಆಡುವುದೆಂದು ವಿವರಿಸುವೆಯಾ?
- ನೀನು ಯಾವಾಗಲಾದರೂ ಹೊಲದ ಕೆಲಸದಲ್ಲಿ ನಿನ್ನ ಕುಟುಂಬಕ್ಕೆ ಸಹಾಯ ಮಾಡಿದ್ದೀಯಾ?
- ಹೊಲದಲ್ಲಿ ಬೆಳೆಯುವ ಅಹಾರದಲ್ಲಿ ನಿನಗೆ ಅತ್ಯಂತ ಪ್ರಿಯವಾದುದು ಯಾವುದು? ಆ ಆಹಾರವನ್ನು ನೀನು ಹೇಗೆ ತಯಾರಿಸುತ್ತೀಯಾ?
- ಚಿತ್ರದ ಯಾವ ಭಾಗ ನಿನಗೆ ತುಂಬಾ ಇಷ್ಟ? ಏಕೆ?

ನಾನು ಪ್ರತಿ ವಿದ್ಯಾರ್ಥಿನಿ/ವಿದ್ಯಾರ್ಥಿ ಹೇಳುವುದನ್ನು ಸರಿಪಡಿಸದೆ, ಮಧ್ಯೆ ಬಾಯಿ ಹಾಕದೆ ಎಚ್ಚರಿಕೆಯಿಂದ ಕೇಳಿಸಿಕೊಳ್ಳುತ್ತೇನೆ. ನಾನು ಇತರ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಕೇಳಿಸಿಕೊಳ್ಳುವಂತೆಯೂ ಹೇಳುತ್ತೇನೆ. ಅವರು ಚಿತ್ರದಲ್ಲಿ ನೋಡುವುದನ್ನು ಮತ್ತು ಅವರಿಗೆ ಗೊತ್ತಿರುವುದನ್ನು ಹೇಳುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ, ಆ ಮೂಲಕ ಅವರ ಬಗ್ಗೆ ಬಹಳಷ್ಟು ತಿಳಿದುಕೊಳ್ಳುತ್ತೇನೆ. ಇದು ಅವರ ಸಾಮರ್ಥ್ಯವನ್ನು ಮೌಲ್ಯಾಂಕನ ಮಾಡಲು ಹಾಗೂ ಅವರನ್ನು ಬೆಂಬಲಿಸುವ ರೀತಿಯನ್ನು ಕಂಡುಕೊಳ್ಳಲು ಸಹಾಯಮಾಡುತ್ತದೆ.
ನನ್ನ ಕೆಲವು ವಿದ್ಯಾರ್ಥಿಗಳು ಸಂಕೋಚದಿಂದ ಮಾತನಾಡುವುದಿಲ್ಲ. ಆದರೆ ಅವರು ಸಹಪಾಠಿಗಳು ಹೇಳುವುದನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳುತ್ತಾರೆ. ಅವರು ಒಂದು ಪದ, ಒಂದು ಸನ್ನೆ ಅಥವಾ ತಲೆಯನ್ನು ಅಲ್ಲಾಡಿಸುವ ಮೂಲಕ ಉತ್ತರಿಸಬಹುದಾದ ಸರಳ ಪ್ರಶ್ನೆಗಳನ್ನು ನಾನು ಕೇಳುತ್ತೇನೆ. ಇದು ಅವರಿಗೆ ಅರ್ಥವಾಗುತ್ತಿದೆ ಎಂಬುದನ್ನು ತಿಳಿಸುತ್ತದೆ.
ನಾನು ಯಾವಾಗಲೂ ನನ್ನ ವಿದ್ಯಾರ್ಥಿಗಳಿಗೆ ಮಾತನಾಡುವ ಮತ್ತು ಆಲಿಸುವ ಉತ್ತಮ ಮಾದರಿಗಳನ್ನು ಕೊಡಲು ಪ್ರಯತ್ನಿಸುತ್ತೇನೆ. ನಾನು ಸ್ಪಷ್ಟವಾಗಿ ಮಾತನಾಡುತ್ತೇನೆ, ಅವರ ಉತ್ತರಗಳಿಗೆ ನನ್ನ ಆಸಕ್ತಿಯನ್ನು ಸೂಚಿಸಲು, ಉತ್ತರ ಕೊಡುವವರನ್ನೇ ನೋಡುತ್ತಾ, ಮುಂದಿನ ಪ್ರಶ್ನೆಗಳನ್ನು ಕೇಳುತ್ತೇನೆ.

**ಚಿಂತನೆಗೊಂದು ಕ್ಷಣ**

- ಪ್ರಿಯಾ ಅವರ ಯಾವ ಪ್ರಶ್ನೆಗಳು ವಿದ್ಯಾರ್ಥಿಗಳನ್ನು ಶೋಧನಾತ್ಮಕ ಮಾತು ಆಡುವಂತೆ ಪ್ರೋತ್ಸಾಹಿಸುತ್ತವೆ?
- ಅವರು ಎಲ್ಲಾ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ತೊಡಗುವಂತೆ ಹೇಗೆ ನೋಡಿಕೊಳ್ಳುತ್ತಾರೆ?
- ವಿದ್ಯಾರ್ಥಿಗಳನ್ನು ಮಾತುಗಾರ ಮತ್ತು ಕೇಳುಗಾರರಾಗಿ ಮೌಲ್ಯಮಾಪನ ಮಾಡಲು ಪ್ರಿಯಾ ಅವರಿಗೆ ಯಾವ ಅವಕಾಶಗಳಿವೆ?

ಬಹುಶ: ನಿಮ್ಮ ವಿದ್ಯಾರ್ಥಿಗಳೂ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಾ ಹಿನ್ನೆಲೆಗಳಿಂದ ಬಂದವರಿರಬಹುದು. ನಿಮ್ಮ ತರಗತಿಯಲ್ಲಿ ನೀವು ಬಳಸುವ ಮಾತನಾಡುವಿಕೆ ಮತ್ತು ಆಲಿಸುವಿಕೆ ಚಟುವಟಿಕೆಗಳು ವಿದ್ಯಾರ್ಥಿಗಳು ಹೊಂದಿರುವ ವಿವಿಧ ಜ್ಞಾನವನ್ನು ಹೊರತೆಗೆಯುವಂತಿರಬೇಕು. ಇದು ಶಾಲಾಭಾಷೆಗಿಂತ ಭಿನ್ನವಾದ ಮನೆಭಾಷೆಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಅಗತ್ಯ. ಪ್ರಸಂಗ ಅಧ್ಯಯನ-1 ರಲ್ಲಿ ಬಳಸಿರುವ ಚಿತ್ರಗಳು ಯಾವ ರೀತಿಯಲ್ಲಿ ಪ್ರಿಯಾ ಅವರ ಎಲ್ಲಾ ವಿದ್ಯಾರ್ಥಿಗಳಿಗೂ ಪರಿಚಿತ ದೃಶ್ಯಗಳಾಗಿದ್ದಿರಬಹುದೆಂದು ಗಮನಿಸಿ. ಮೌನವಾಗಿರುವ ವಿದ್ಯಾರ್ಥಿಗಳೂ ಕೂಡ ಆಲಿಸುವಿಕೆ, ಆಲೋಚಿಸುವಿಕೆ ಮತ್ತು ಕಲಿಕೆಯಲ್ಲಿ ಭಾಗವಹಿಸುತ್ತಾರೆ ಎನ್ನುವುದನ್ನು ತಿಳಿಯಿರಿ.

ಈ ಕೆಳಗಿನ ಚಟುವಟಿಕೆಯಲ್ಲಿ ನಿಮ್ಮ ವಿದ್ಯಾರ್ಥಿಗಳಲ್ಲಿ ಮಾತನಾಡುವಿಕೆ ಮತ್ತು ಆಲಿಸುವಿಕೆಯನ್ನು ಪ್ರೋತ್ಸಾಹಿಸಲು ಚಿತ್ರಗಳನ್ನು ಬಳಸುವಿರಿ.

## ಚಟುವಟಿಕೆ 2: ಚಿತ್ರ-ಆಧಾರಿತ ಗುಂಪು ಚರ್ಚೆ

ಈ ಚಟುವಟಿಕೆಗೆ ನಿಮ್ಮ ಪಠ್ಯಪುಸ್ತಕ ಅಥವಾ ಶಾಲೆ ಅಥವಾ ಸಮುದಾಯ ಸಂಪನ್ಮೂಲದಿಂದ ತೆಗೆದುಕೊಂಡ ಯಾವುದೇ ಚಿತ್ರವನ್ನು

ಬಳಸಬಹುದು. ಪ್ರಸಂಗ ಅಧ್ಯಯನ-1 ರಿಂದ ಪಡೆದ ಐಡಿಯಾಗಳನ್ನು ಬಳಸಿಕೊಂಡು, ಒಂದು ಪಾಠವನ್ನು ಯೋಜಿಸಿ. ಅದರಲ್ಲಿ ಚಿತ್ರ ಅಥವಾ ಸರಣಿ ಚಿತ್ರಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಜ್ಞಾನ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ ಚಿತ್ರದಲ್ಲಿ ಅವರು ಕಾಣುವುದು ಏನು, ಏನಾಗಲಿದೆ ಎಂದು ಕಲ್ಪಿಸಿಕೊಂಡು ಮಾತಾಡುವಂತೆ ಪ್ರೋತ್ಸಾಹಿಸಿ.

ಪಾಠವನ್ನು ಯೋಜಿಸುವ ಮುನ್ನ, ಇದನ್ನು ಮಾಡಿ:

- ಈ ಚಟುವಟಿಕೆಯನ್ನು ನೀವು ಸಂಘಟಿಸುವ ರೀತಿಯನ್ನು ಕುರಿತು ಆಲೋಚಿಸಿ. ಜೋಡಿ, ಸಣ್ಣ ಗುಂಪು ಅಥವಾ ಇಡೀ ತರಗತಿ ಕಾರ್ಯವೇ ಹಾಗೂ ತರಗತಿಯ ಒಳಗೆ ಅಥವಾ ಹೊರಗೆ ಮಾಡಬೇಕೇ ಎಂಬುದನ್ನು ಪರಿಗಣಿಸಿ.
- ವಿದ್ಯಾರ್ಥಿಗಳಿಗೆ ನೀವು ಕೇಳುವ ಪ್ರಶ್ನೆಗಳ ರೀತಿಯನ್ನು ಸಹೋದ್ಯೋಗಿಯೊಂದಿಗೆ ಚರ್ಚಿಸಿ.

ಕೆಳಗಿನ ಪ್ರಶ್ನೆಗಳು ಚಿತ್ರ-2 ಅನ್ನು ಆಧರಿಸಿವೆ. ನೀವು ಬಳಸುವ ಚಿತ್ರ ಮತ್ತು ಬೋಧಿಸುವ ತರಗತಿಯ ವಯಸ್ಸಿಗೆ ಅನುಗುಣವಾಗಿ ಪ್ರಶ್ನೆಗಳನ್ನು ರಚಿಸಿಕೊಳ್ಳುವ ಅಗತ್ಯವಿದೆ.

- **ವಿವರಣಾ ಪ್ರಶ್ನೆಗಳು**
  - ಈ ಚಿತ್ರದಲ್ಲಿ ಏನಾಗುತ್ತಿದೆ ಎಂದು ನಿಮಗನ್ನಿಸುತ್ತಿದೆ?
  - ಮಕ್ಕಳು ಏನು ಮಾಡುತ್ತಿದ್ದಾರೆ?
  - ಎಷ್ಟು ಹೆಣ್ಣುಮಕ್ಕಳಿದ್ದಾರೆ? ಎಷ್ಟು ಗಂಡುಮಕ್ಕಳು? ಎಷ್ಟು ವಯಸ್ಕರು?
  - ಯಾವ ಬಣ್ಣಗಳನ್ನು ಕಾಣುತ್ತಿದ್ದೀರಿ?
- **ತಾರ್ಕಿಕ ಪ್ರಶ್ನೆಗಳು**
  - ಕೆಲವು ವಯಸ್ಕರತ್ತ ತೋರಿಸಿ, ಕೇಳಿ, 'ಇವರು ಯಾರೆಂದು ನಿಮಗನ್ನಿಸುತ್ತಿದೆ, ಪರಸ್ಪರ ಏನು ಹೇಳಿಕೊಳ್ಳುತ್ತಿದ್ದಾರೆ?'
  - ಕೆಲವು ಮಕ್ಕಳತ್ತ ತೋರಿಸಿ, ಕೇಳಿ 'ಇವರು ಏನು ಹೇಳುತ್ತಿದ್ದಾರೆ ಎಂದು ನಿಮಗನ್ನಿಸುತ್ತಿದೆ?
  - ಈ ಚಿತ್ರವು ಬೇಸಿಗೆ, ಮಳೆ ಅಥವಾ ಚಳಿಗಾಲದ ಸನ್ನಿವೇಶವನ್ನು ತೋರಿಸುತ್ತಿದೆಯೆ? ಅದು ನಿಮಗೆ ಹೇಗೆ ಗೊತ್ತು?
  - ಇದು ದಿನದ ಯಾವ ಸಮಯವೆಂದು ಅನ್ನಿಸುತ್ತಿದೆ? ಏಕೆ?
  - ಶಾಂತವಾಗಿದೆಯೇ ಅಥವಾ ಗದ್ದಲವೇ? ಹೇಗೆ ಹೇಳುತ್ತೀರಿ?
  - ಆಹಾರ ತಿನ್ನುತ್ತಿರುವ ಮಗು ತಾನು ಕುಳಿತಲ್ಲಿಂದಲೇ ಹುಡುಗಿಯರು ಹಗ್ಗ ಜಿಗಿ ಆಡುತ್ತಿರುವುದನ್ನು ನೋಡಬಹುದು ಎಂದು ನಿಮಗನ್ನಿಸುತ್ತಿದೆಯೇ?
  - ಮಕ್ಕಳು ಬೇಸರವಾಗಿದ್ದಾರೆಯೆ ಅಥವಾ ಖುಷಿಯಾಗಿದ್ದಾರೆಯೇ? ನೀವು ಹೇಗೆ ಹೇಳುವಿರಿ?
  - ಹುಡುಗಿಯರು ಮತ್ತು ಹುಡುಗರು ಏಕೆ ಬೇರೆ ಬೇರೆ ಆಟಗಳನ್ನು ಆಡುತ್ತಿದ್ದಾರೆ?
  - ಆ ಹುಡುಗಿಗೆ ಕಿವಿಯ ಹತ್ತಿರ ಜೋರಾದ ಶಬ್ದ ಮಾಡಿದರೆ ಇಷ್ಟವೇ?
- **ಊಹಿಸುವ ಪ್ರಶ್ನೆಗಳು**
  - ಆ ಹುಡುಗ ಕವಣಿಯಿಂದ ಹೊಡೆದಾಗ ಏನಾಗಲಿದೆ?
  - ಆ ಹುಡುಗ ಚೆಂಡನ್ನು ಹಿಡಿಯುವನೇ?
  - ಮುಂದೆ ಏನಾಗಲಿದೆ ಎಂದು ನಿಮಗನ್ನಿಸುತ್ತಿದೆ?
- **ವಿದ್ಯಾರ್ಥಿಗಳ ಸ್ವಂತ ಅನುಭವದೊಂದಿಗೆ ಚಿತ್ರಗಳನ್ನು ಸಂಬಂಧ ಕಲ್ಪಿಸುವುದು**
  - ನಿಮ್ಮ ಶಾಲಾ ಕಾಂಪೌಂಡು ಇದರಂತೆ ಕಾಣುತ್ತದೆಯೇ?
  - ಈ ಆಟಗಳನ್ನು ನೀವು ಆಡುತ್ತೀರಾ?
  - ಯಾವ ಆಟಗಳನ್ನು ಆಡಲು ಇಚ್ಛಿಸುತ್ತೀರಿ?
  - ನೀವು ಆಟದ ಮೈದಾನದಲ್ಲಿದ್ದರೆ, ಏನು ಮಾಡಲು ಇಚ್ಛಿಸುತ್ತಿದ್ದಿರಿ?



ಚಿತ್ರ 2 ವಿದ್ಯಾರ್ಥಿ ಮಾತನ್ನು ಪ್ರೋತ್ಸಾಹಿಸಲು ಎರಡು ಚಿತ್ರಗಳು.

**ಚಿಂತನೆಗೊಂದು ಕ್ಷಣ**

ನಿಮ್ಮ ತರಗತಿಯಲ್ಲಿ ಈ ಚಟುವಟಿಕೆಯನ್ನು ಮಾಡಿದ ಮೇಲೆ, ಈ ಪ್ರಶ್ನೆಗಳಿಗೆ ಉತ್ತರಿಸಿ:

- ಯಾವ ರೀತಿಯ ಪ್ರಶ್ನೆಗಳನ್ನು ನೀವು ಕೇಳಿದಿರಿ?
- ನಿಮ್ಮ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳ ಗುಣಮಟ್ಟ ಮತ್ತು ವಿಸ್ತಾರದ ಬಗ್ಗೆ ನೀವೇನು ಗಮನಿಸಿದಿರಿ?
- ಈ ಚಟುವಟಿಕೆಯನ್ನು ಮಾಡುವಾಗ ವಿದ್ಯಾರ್ಥಿಗಳು ಯಾವ ಕೌಶಲಗಳನ್ನು ಕಲಿಯುತ್ತಿದ್ದರು? (ಕೇಳಿಸಿಕೊಳ್ಳುವುದು, ಪ್ರಶ್ನೆಗಳಿಗೆ ಉತ್ತರಿಸುವುದು, ತಮ್ಮ ಅನುಭವಗಳನ್ನು ಹೇಳಿಕೊಳ್ಳುವುದು, ಅಥವಾ ಆಲೋಚಿಸಿ, ಕಾರಣ ಹೇಳಲು ಭಾಷೆಯನ್ನು ಬಳಸುವುದು – ಹೀಗೆ ಇರಬಹುದು)
- ಅವರ ಯಾವುದಾದರೂ ಮಾತು ಇತರ ಪಠ್ಯಕ್ರಮ ಕ್ಷೇತ್ರಗಳಾದ ಗಣಿತ, ಭೂಗೋಳ ಅಥವಾ ವಿಜ್ಞಾನಕ್ಕೆ ಸಂಬಂಧಿಸಿದುದೇ?

ಸಂಪನ್ಮೂಲ 2, 'ಆಲೋಚನೆಯನ್ನು ಬೆಳೆಸಲು ಪ್ರಶ್ನಿಸುವಿಕೆಯ ಬಳಕೆ' ಯನ್ನು ಓದಿ, ಪಾಠಯೋಜನೆ ಮತ್ತು ಚಟುವಟಿಕೆಗಳಲ್ಲಿ ಪ್ರಶ್ನೆಗಳ ಬಳಕೆಯ ಕುರಿತು ಹೆಚ್ಚು ತಿಳಿಯಿರಿ.

**ವಿಡಿಯೊ:** Using questioning to promote thinking

ಮುಂದಿನ ಚಟುವಟಿಕೆಯಲ್ಲಿ, ನಿಮ್ಮ ವಿದ್ಯಾರ್ಥಿಗಳು ಕಥೆಗಳನ್ನು ಕಟ್ಟಿ, ಹೇಳುವಂತೆ ಪ್ರೋತ್ಸಾಹಿಸಲು ಚಿತ್ರಗಳನ್ನು ನೀವು ಬಳಸುವಿರಿ.

## ಚಟುವಟಿಕೆ 3: ಚಿತ್ರಗಳಿಂದೊಂದು ಕಥೆ

ಈ ಕೆಳಗಿನ ನಾಲ್ಕು ಚಿತ್ರಗಳನ್ನು ನೋಡಿ. ಆ ಚಿತ್ರಗಳಿಗೆ ಸಂಬಂಧಿಸಿದ ಒಂದು ಕಥೆಯನ್ನು ಕಟ್ಟಿ. ಅದು ನಿಮ್ಮಿಚ್ಛೆಯಂತೆ ಚಿಕ್ಕ ಅಥವಾ ದೊಡ್ಡದಾಗಿದ್ದು, ಸಂಭಾಷಣೆಯನ್ನು ಒಳಗೊಂಡಿರಬಹುದು,.

ನಿಮ್ಮ ಸಹೋದ್ಯೋಗಿಗೆ ಕಥೆಯನ್ನು ಹೇಳಿ. ಇದರ ಕುರಿತು ಅವರಿಗೆ ಏನನ್ನಿಸಿತು?



ಚಿತ್ರ 3 ಕಥೆ ಕಟ್ಟಲು ಚಿತ್ರಗಳ ಬಳಕೆ

ಈಗ ನೀವು ವಿದ್ಯಾರ್ಥಿಗಳೊಂದಿಗೆ ಚಿತ್ರ-ಆಧಾರಿತ ಕಥೆ ಹೇಳುವ ಚಟುವಟಿಕೆಯನ್ನು ಪ್ರಯತ್ನಿಸಿ.  ಈ ಉದ್ದೇಶಕ್ಕಾಗಿ ಯಾವುದೇ ಸರಣಿ ಚಿತ್ರಗಳನ್ನು ಬಳಸಬಹುದು – ಪುಸ್ತಕ, ನಿಯತಕಾಲಿಕ, ಸುದ್ದಿ ಪತ್ರಿಕೆಗಳಿಂದ ತೆಗೆದುಕೊಂಡ ಚಿತ್ರಗಳಾಗಿರಬಹುದು ಅಥವಾ ಸ್ನೇಹಿತರು, ಸಹೋದ್ಯೋಗಿ, ನೀವೇ ರಚಿಸಿದ್ದಾಗಿರಬಹುದು.

ಚಿತ್ರ 3 ರಲ್ಲಿನ ಸರಣಿ ಚಿತ್ರಗಳ ಕುರಿತು ನಿಮ್ಮದೇ ಆದ ಚಿಕ್ಕ ಕಥೆಯನ್ನು ಹೇಳುವ ಮೂಲಕ ಚಟುವಟಿಕೆಯ ಮಾದರಿ ಪ್ರದರ್ಶನವನ್ನು ಆರಂಭಿಸಿ.  ಆ ನಂತರ ವಿದ್ಯಾರ್ಥಿಗಳನ್ನು ಜೋಡಿ ಅಥವಾ ಗುಂಪುಗಳಲ್ಲಿ ಕೂರಿಸಿ, ಅದೇ ಚಿತ್ರಗಳನ್ನು ಉಪಯೋಗಿಸಿಕೊಂಡು ಇನ್ನೊಂದು ಕಥೆಯನ್ನು ಕಟ್ಟುವಂತೆ ತಿಳಿಸಿ.  ಜೋಡಿ ಅಥವಾ ಗುಂಪಿನಲ್ಲಿ ವಿದ್ಯಾರ್ಥಿಗಳನ್ನು ಕೂರಿಸುವಾಗ ಅವರ ಮನೆಭಾಷೆ ಒಂದೇ ಇರುವಂತೆ ನೋಡಿಕೊಳ್ಳಿ.  ಏಕೆಂದರೆ ಅವರು ಅದೇ ಭಾಷೆಯಲ್ಲಿ ಕಥೆ ರಚಿಸಿ ಹೇಳಲು ಅನುಕೂಲ.  ಸಾಧ್ಯವಾದರೆ, ವಿವಿಧ ಧ್ವನಿ ಮತ್ತು ಆಂಗಿಕಭಾವಗಳನ್ನು ಉಪಯೋಗಿಸಿಕೊಳ್ಳಲು ಪ್ರೋತ್ಸಾಹಿಸಿ.

ಎಲ್ಲರೂ ಸಿದ್ಧವಾದ ಮೇಲೆ, ಬೇರೆಯ ಜೋಡಿ ಅಥವಾ ಗುಂಪು ಅಥವಾ ಇಡೀ ತರಗತಿಗೆ ಕಥೆ ಹೇಳುವಂತೆ ಸೂಚಿಸಿ. ಮನೆಭಾಷೆಯಲ್ಲಿರುವ ಕಥೆಗಳನ್ನು ಶಾಲಾಭಾಷೆಗೆ ಬದಲಾಯಿಸಲು ಇರುವ ರೀತಿಯನ್ನು ಚರ್ಚಿಸಲು ಕೂಡ ಸಮಯಾವಕಾಶಕೊಡಬಹುದು.

**ಚಿಂತನೆಗೊಂದು ಕ್ಷಣ**

- ಈ ಚಟುವಟಿಕೆಯು ನಿಮ್ಮ ವಿದ್ಯಾರ್ಥಿಗಳಿಗೆ ಯಾವ ರೀತಿಯ ಭಾಷಾ ಸಂಬಂಧಿ ಕಲಿಕಾ ಅವಕಾಶಗಳನ್ನು ಒದಗಿಸಿದವು?
- ತರಗತಿಯಲ್ಲಿನ ಪ್ರತಿಯೊಬ್ಬರೂ ಒಳಗೊಳ್ಳುವಂತೆ ಹೇಗೆ ನೀವು ದೃಢಪಡಿಸಿಕೊಂಡಿರಿ?
- ಇತಿಹಾಸದಂತಹ ನಿರ್ದಿಷ್ಟ ಪಠ್ಯಕ್ರಮಕ್ಕೆ ಇದನ್ನು ಹೇಗೆ ನೀವು ಅಳವಡಿಸಿಕೊಳ್ಳುತ್ತೀರಿ?
- ಇಂತಹ ಚಟುವಟಿಕೆಯ ಮೂಲಕ ಭಾಷೆ ಮತ್ತು ವಿಷಯ ಜ್ಞಾನವನ್ನು ನೀವು ಹೇಗೆ ಮೌಲ್ಯಮಾಪನ ಮಾಡುತ್ತೀರಿ?

## 3. ನಿಮ್ಮ ಬೋಧನೆ ಕುರಿತು ತಿಳಿಯಲು ವಿದ್ಯಾರ್ಥಿಮಾತಿನ ಬಳಕೆ

ವಿದ್ಯಾರ್ಥಿಗಳು ಆಗಾಗ್ಗೆ ಅವರ ಕಲಿಕೆ ಕುರಿತು ಮಾತನಾಡಿಕೊಳ್ಳುತ್ತಾರೆ.  ಈಗ ಚಟುವಟಿಕೆ 4 ಪ್ರಯತ್ನಿಸಿ.

### ಚಟುವಟಿಕೆ – 4:  ನಿಮ್ಮ ವಿದ್ಯಾರ್ಥಿಗಳ ಮಾತನ್ನು ಕೇಳಿಸಿಕೊಳ್ಳುವುದು

ಒಂದು ಕಲಿಕಾ ಸಂಪನ್ಮೂಲವಾಗಿ ವಿದ್ಯಾರ್ಥಿ ಮಾತಿನ ಮಹತ್ವವನ್ನು ಅರ್ಥಮಾಡಿಕೊಳ್ಳಲು, ನಿಮ್ಮ ವಿದ್ಯಾರ್ಥಿಗಳು ನಡೆಸುವ

ಸಂಭಾಷಣೆಯನ್ನು ಪ್ರತ್ಯೇಕವಾಗಿ ಕೇಳಿಸಿಕೊಳ್ಳಲು ಪ್ರಯತ್ನಿಸಿ. ಸಾಧ್ಯವಾದಲ್ಲಿ, ಇದನ್ನು ಒಂದಕ್ಕಿಂತ ಹೆಚ್ಚುಬಾರಿ ಮಾಡಿ.

ಈ ಕೆಳಗಿನ ಕೆಲವು ಸಂದರ್ಭಗಳಲ್ಲಿ ನಿಮ್ಮ ವಿದ್ಯಾರ್ಥಿಗಳು ತೊಡಗಿಕೊಂಡಿರುವಾಗ ಸಾಧ್ಯವಾದರೆ ಅವರಿಗೆ ಗೊತ್ತಾಗದಂತೆ ಕೇಳಿಸಿಕೊಳ್ಳಿ:

- ಯಾವುದಕ್ಕಾದರೂ ಗಮನಕೊಡುವಾಗ
- ಸೂಕ್ಷ್ಮವಾಗಿ ಆಲೋಚನೆಯಲ್ಲಿ ತೊಡಗಿರುವಾಗ
- ಅಭಿಪ್ರಾಯಗಳನ್ನು ಹಂಚಿಕೊಳ್ಳುವಾಗ
- ವ್ಯವಸ್ಥಿತ ರೀತಿಯಲ್ಲಿ ಅವರ ಅಭಿಪ್ರಾಯ-ಅನುಭವಗಳನ್ನು ಸಂಘಟಿಸುವಾಗ
- ಒಬ್ಬರು ಮತ್ತೊಬ್ಬರ ಅಭಿಪ್ರಾಯ ಮತ್ತು ಅನುಭವಗಳಿಗೆ ಸವಾಲು ಹಾಕುವಾಗ
- ಅಭಿಪ್ರಾಯ ಮತ್ತು ಅನುಭವಗಳ ಆಧಾರದ ಮೇಲೆ ವಾದಿಸುವಾಗ
- ಊಹೆ ಮಾಡುವಾಗ
- ಹಿಂದಿನ ಅಭಿಪ್ರಾಯ ಅಥವಾ ಅನುಭವವನ್ನು ನೆನಪಿಸಿಕೊಳ್ಳುವಾಗ
- ಇನ್ನೊಬ್ಬರ ಅನುಭವ ಅಥವಾ ಭಾವನೆಗಳನ್ನು ಕಲ್ಪಿಸಿಕೊಳ್ಳುವಾಗ
- ತಮ್ಮ ಸ್ವಂತ ಭಾವನೆಗಳು ಅಥವಾ ಅನುಭವಗಳನ್ನು ನೆನಪಿಗೆ ತಂದುಕೊಳ್ಳುವಾಗ

**ಚಿಂತನೆಗೊಂದು ಕ್ಷಣ**

- ವಿದ್ಯಾರ್ಥಿಗಳು ಏನನ್ನಾದರೂ ಕಲಿಯುವ ಪ್ರಕ್ರಿಯೆಯಲ್ಲಿದ್ದಾಗ ಅಥವಾ ತಮ್ಮ ಕಲಿಕೆಯನ್ನು ಮಾತಿನ ಮೂಲಕ ಕ್ರೋಢೀಕರಿಸುವಾಗ ನೀವು ಕೇಳಿಸಿಕೊಂಡಿದ್ದೀರಾ?
- ನಿಮ್ಮ ಬೋಧನೆಗೆ ಈ ಸಂಭಾಷಣೆಗಳನ್ನು ಸಂಪನ್ಮೂಲಗಳಾಗಿ ಹೇಗೆ ಬಳಸುವಿರಿ?

ಶಿಕ್ಷಕರಾಗಿ, ಒಳ್ಳೆಯ ಕೇಳುಗರಾಗುವುದು ಬಹಳ ಮುಖ್ಯ. ನಿಮ್ಮ ವಿದ್ಯಾರ್ಥಿಗಳಿಂದ ಆಗಾಗ್ಗೆ ನೀವು ಕೇಳುವ ಅಂಶಗಳನ್ನು ನಿಮ್ಮ ಮುಂದಿನ ಪಾಠಯೋಜನೆಗೆಳಲ್ಲಿ ಸೇರಿಸಿಕೊಳ್ಳಬಹುದು.

ಈಗ ಪ್ರಸಂಗ ಅಧ್ಯಯನ-2 ರಲ್ಲಿನ ಎರಡು ಉದಾಹರಣೆಗಳನ್ನು ಓದಿ. ನೀವು ಓದುವಾಗ, ಶಿಕ್ಷಕರು ತಾವು ಕೇಳಿದ್ದನ್ನು ತಮ್ಮ ಬೋಧನೆಗಾಗಿ ಯಾವ ರೀತಿ ಬಳಸಿಕೊಳ್ಳುತ್ತಾರೆ ಎಂದು ಆಲೋಚಿಸಿ. ಓದಿದ ಮೇಲೆ, ನಿಮ್ಮ ವಿದ್ಯಾರ್ಥಿಗಳ ಮಾತನ್ನು ಕೇಳಿಸಿಕೊಳ್ಳುವ ಮತ್ತೊಂದು ಅವಕಾಶಕ್ಕಾಗಿ ಪ್ರಯತ್ನಿಸಿ. ಅವರ ಮಾತಿನ ಯಾವ ಅಂಶಗಳು ನಿಮ್ಮ ಮುಂದಿನ ತರಗತಿ ಚಟುವಟಿಕೆಗಳಿಗೆ ನೆರವಾಗುತ್ತವೆ?

## ಪ್ರಸಂಗ ಅಧ್ಯಯನ 2: ವಿದ್ಯಾರ್ಥಿಗಳ ಮಾತನ್ನು ಬೆಳೆಸುವಿಕೆ (Building on students' talk)

*ಮಂಡ್ಯ ಜಿಲ್ಲೆಯಲ್ಲಿ ಭೂಮಿಕಾ ಎರಡನೇ ತರಗತಿ ಶಿಕ್ಷಕಿ.*

ನಾನು ಊಟಮಾಡುತ್ತಿದ್ದೆ. ಹೊರಗಡೆ ಗಟ್ಟಿಯಾಗಿ ಮಾತಾಡುತ್ತಿದ್ದುದ್ದು ಕೇಳಿಸುತ್ತಿತ್ತು. ಮಧ್ಯ ಪ್ರವೇಶಿಸುವುದು ಬೇಡವೆಂದು, ಹತ್ತಿರದಿಂದ ಕೇಳಿಸಿಕೊಳ್ಳಬೇಕೆಂದು ತೀರ್ಮಾನಿಸಿದೆ. ಅಂದು ಬೆಳಗ್ಗೆ ನಾನು ಅವರಿಗೆ ಓದಿದ ಪದ್ಯದ ಕುರಿತು ನಾಲ್ಕು ವಿದ್ಯಾರ್ಥಿಗಳು ವಾದಿಸುತ್ತಿದ್ದರು. ನಾನು ಪದ್ಯ ಓದುತ್ತಿದ್ದಾಗ, ತರಗತಿಯು ನಿಶ್ಯಬ್ಧವಾಗಿ ಕೇಳಿಸಿಕೊಳ್ಳುತ್ತಿತ್ತು. ಆದ್ದರಿಂದ ಎಲ್ಲರೂ ಅರ್ಥಮಾಡಿಕೊಂಡಿದ್ದಾರೆಂದು ನಾನು ಅಂದುಕೊಂಡೆ. ಆದರೆ ಆ ವಿದ್ಯಾರ್ಥಿಗಳು ವಾದಿಸುವುದನ್ನು ಕೇಳಿದಾಗ, ಅದನ್ನು ಪೂರ್ತಿ ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ ಅನ್ನಿಸಿತು. ಅವರು ಪದ್ಯದ ಪ್ರಮುಖ ಪದಗಳ ಅರ್ಥವನ್ನು ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿಕೊಂಡಿದ್ದನ್ನು ನಾನು ಕೇಳಿ ತಿಳಿದುಕೊಂಡೆ.

ಮರುದಿನ, ಆ ಪದ್ಯದ ಕುರಿತು ಅವರು ಅರ್ಥಮಾಡಿಕೊಂಡ ರೀತಿಯನ್ನು ತಿಳಿದುಕೊಳ್ಳಲು ನಿರ್ಧರಿಸಿದೆ. ಇದರಿಂದ ನಾನು ಪಠ್ಯ-ಆಧಾರಿತ ಪಾಠಗಳನ್ನು ಮಾಡುವಾಗ, ಅವರಿಗೆ ಪರಿಚಿತವಲ್ಲದ ಪದಗಳಿದ್ದಾಗ, ಹೆಚ್ಚು ಸಮಯ ನೀಡಿ, ಗಮನವಹಿಸಿ ವಿವರಿಸಬೇಕೆಂದು ಕಲಿತುಕೊಂಡೆ. ಇದನ್ನು ನಾನು ಅಲ್ಲಿಂದ ನಿರಂತರವಾಗಿ ಮಾಡಿಕೊಂಡು ಬಂದೆ ಹಾಗೂ ಈಗಾಗಲೇ ಅದರ ಲಾಭಗಳನ್ನು

ಕಂಡುಕೊಂಡಿದ್ದೇನೆ.

*ಸಂಗೀತಾ ಬೆಂಗಳೂರಿನಲ್ಲಿ ಐದನೇ ತರಗತಿ ಶಿಕ್ಷಕಿ.*

ಬರೆವಣಿಗೆ ನಿಯೋಜಿತ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ಮುಖ್ಯಾಂಶಗಳನ್ನು ನಿರ್ದಿಷ್ಟವಾಗಿ ಹೀಗೆಯೇ ಬರೆಯಬೇಕೆಂದು ನಿರೀಕ್ಷಿಸುತ್ತಿದ್ದೆ. ಇದರಿಂದ ಅವರ ಬರೆವಣಿಗೆ ಒಂದೇ ರೀತಿಯಾಗಿರುತ್ತಿತ್ತು.

ಒಮ್ಮೆ ಬೆಳಗ್ಗೆ, ತರಗತಿಗೆ ಮುಂಚೆ, ಒಟ್ಟಾಗಿ ಹಲವಾರು ವಿದ್ಯಾರ್ಥಿಗಳು ಮಾತನಾಡುತ್ತಿದ್ದುದನ್ನು ಕೇಳಿದೆ. ಆ ಕೆಲವೇ ನಿಮಿಷಗಳಲ್ಲಿ, ಅವರು ವಿವಿಧ ವಿಷಯವಸ್ತು, ವಿವರಣೆ, ಪ್ರಶ್ನಿಸುವಿಕೆ, ವಾದ ಮತ್ತು ಊಹಿಸುವಿಕೆ - ಹೀಗೆ ಆಶ್ಚರ್ಯಕರ ರೀತಿಯಲ್ಲಿ ಚರ್ಚಿಸಿದರು. ಅವರಲ್ಲಿ ಅನೇಕ ಆಸಕ್ತಿಯುತ ಐಡಿಯಾಗಳಿದ್ದವು.

ಇದನ್ನು ಕೇಳಿಸಿಕೊಂಡ ಫಲವಾಗಿ, ವಿದ್ಯಾರ್ಥಿಗಳಿಗೆ ಅವರ ಮೌಖಿಕ ಭಾಷಾ ಸಂಪನ್ಮೂಲಗಳು, ಅನುಭವ ಮತ್ತು ಆಸಕ್ತಿಗಳನ್ನು ಉಪಯೋಗಿಸಲು ಅವಕಾಶ ಕೊಟ್ಟರೆ, ಅವರು ಇನ್ನೂ ಹೆಚ್ಚಿನ ಕ್ರಿಯಾಶೀಲತೆಯಿಂದ, ಅರ್ಥಪೂರ್ಣವಾಗಿ ಬರೆಯಬಲ್ಲರು ಎಂದು ನನಗೆ ತಿಳಿಯಿತು.

ಈಗ ನಾನು ವೈಯಕ್ತಿಕ ಬರೆವಣಿಗೆ ಕಾರ್ಯ ಕೊಡುವ ಮುನ್ನ, ನಾಲ್ಕು ಅಥವಾ ಐದು ವಿದ್ಯಾರ್ಥಿಗಳ ಗುಂಪಿಗೆ ಒಂದೊಂದು ವಿಷಯವನ್ನು ಕೊಟ್ಟು ಚರ್ಚಿಸುವಂತೆ ಹೇಳುತ್ತೇನೆ. ಇಲ್ಲಿ ತನಕ, ಅವರು ಚರ್ಚಿಸಿ, ಬರೆದ ವಿಷಯಗಳಲ್ಲಿ ಶಾಲೆಯ ಹೊರಗಿರುವ ಟೀ ಅಂಗಡಿ, ಸ್ಥಳೀಯ ಹಬ್ಬ, ಇತ್ತೀಚಿನ ಆಟೋಟ ಕಾರ್ಯಕ್ರಮ, ನೆರೆಹೊರೆ ಇರುವ ಮರಗಳು ಸೇರಿವೆ. ಕೆಲವೊಮ್ಮೆ ನಾನು ಶಾಲಾಕಾಂಪೌಂಡ್ ಬಳಿ ಕಳುಹಿಸಿ, ಅಲ್ಲಿ ಅವರು ಕಂಡದ್ದನ್ನು ಗಮನಿಸಿ, ಪರಸ್ಪರ ಚರ್ಚಿಸಿ ಆಮೇಲೆ ಅವುಗಳ ಬಗ್ಗೆ ಬರೆಯುವಂತೆ ಹೇಳುತ್ತೇನೆ.

ಈ ಮುಂದಿನ ಚಟುವಟಿಕೆಯಲ್ಲಿ, ಮಾತು ಮತ್ತು ಬರವಣಿಗೆಯನ್ನು ಹೊಂದಿರುವ ಗುಂಪು ಚಟುವಟಿಕೆಯನ್ನು ನೀವು ಕೈಗೊಳ್ಳಲಿದ್ದೀರಿ. 'ಗುಂಪು ಕಾರ್ಯ ಬಳಕೆ' ಎಂಬ ಪ್ರಮುಖ ಸಂಪನ್ಮೂಲ ನಿಮಗೆ ಉಪಯುಕ್ತವಾಗಬಹುದು.

### ಚಟುವಟಿಕೆ 5: ಬರೆವಣಿಗೆಗಾಗಿ ಸಿದ್ಧಪಡಿಸಲು ಸಮೂಹ ಮಾತಿನ ಬಳಕೆ

ಸಂಗೀತಾ ಅವರ ಪ್ರಸಂಗ ಅಧ್ಯಯನವನ್ನು ಒಂದು ಮಾರ್ಗದರ್ಶಕವಾಗಿ ಬಳಸಿಕೊಂಡು, ವೈಯಕ್ತಿಕವಾಗಿ ಬರೆಯುವ ಮುನ್ನ ನಿಮ್ಮ ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸುವಂತೆ ಒಂದು ಪಾಠವನ್ನು ಸಿದ್ಧಪಡಿಸಿ

- ನಿಮ್ಮ ತರಗತಿಯನ್ನು ನಾಲ್ಕು, ಐದು ಅಥವಾ ಆರು ವಿದ್ಯಾರ್ಥಿಗಳ ಗುಂಪುಗಳಾಗಿ ವಿಂಗಡಿಸಿ.
- ಪ್ರತೀ ಗುಂಪಿಗೂ ಒಂದು ವಿಷಯವನ್ನು ಚರ್ಚಿಸಲು ಕೊಡಿ. ಇದು ನಿಮ್ಮ ವಿದ್ಯಾರ್ಥಿಗಳ ವಯಸ್ಸು ಮತ್ತು ಆಸಕ್ತಿಗಳನ್ನು ಅವಲಂಬಿಸಿರುತ್ತದೆ. ಸ್ಫೂರ್ತಿ ತುಂಬಲು ಪ್ರತೀ ಗುಂಪಿಗೂ ಫೋಟೋ ಅಥವಾ ಸುದ್ದಿ ಪತ್ರಿಕೆಯಿಂದ ಆಯ್ದು ಕತ್ತರಿಸಿದ ಭಾಗಗಳನ್ನು (clipping) ಕೊಡಬಹುದು.
- ಎರಡು ಅಥವಾ ಮೂರು ವಿದ್ಯಾರ್ಥಿಗಳೊಂದಿಗೆ, ಅವರು ಗುಂಪಿನಲ್ಲಿ ಹೇಗೆ ಮಾತಾಡಬೇಕೆಂದು ತೋರಿಸಿಕೊಡಿ. ಉಪಯುಕ್ತವಾದ ಶೋಧನಾತ್ಮಕ ಪ್ರಶ್ನೆಗಳನ್ನು ಕೇಳುವ ಹಾಗೂ ಸಹಪಾಠಿಗಳ ಉತ್ತರಗಳನ್ನು ಗೌರವಯುತವಾಗಿ ಕೇಳುವ ರೀತಿಯನ್ನು ಪ್ರದರ್ಶಿಸಿ.
- ಅಗತ್ಯವಿದ್ದಾಗ, ಗುಂಪುಗಳ ಬಳಿ ಹೋಗಿ ಸಹಾಯಮಾಡಿ. ಈ ಅವಕಾಶವನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳ ವರ್ತನೆ, ಅವರ ಭಾಷೆಯ ಮೇಲಿನ ಹಿಡಿತ ಹಾಗೂ ಕೊಟ್ಟ ವಿಷಯದ ಕುರಿತು ಅವರಿಗಿರುವ ತಿಳುವಳಿಕೆಯನ್ನು ಗಮನಿಸಿ.
- ಚರ್ಚಾ ಅವಧಿಯ ನಂತರ, ಅವರು ಒಟ್ಟಾಗಿ ಚರ್ಚಿಸಿದ ವಿಷಯದ ಮೇಲೆ ವೈಯಕ್ತಿಕವಾಗಿ ಒಂದು ಕಿರು ಪ್ರಬಂಧವನ್ನು ಬರೆಯಲು ಹೇಳಿ.

- ಕೆಲವು ಸಂದರ್ಭಗಳಲ್ಲಿ, ವಿದ್ಯಾರ್ಥಿಗಳು ವೈಯಕ್ತಿಕವಾಗಿ ಬರೆದ ಪ್ರಬಂಧಗಳನ್ನು ಗುಂಪಿನ ಇತರ ಸದಸ್ಯರಿಗೆ ನೀವು ಹಂಚಲು ಇಚ್ಛಿಸಬಹುದು.
- ಕೊನೆಯದಾಗಿ, ನಿಮ್ಮ ವಿದ್ಯಾರ್ಥಿಗಳ ಬರೆವಣಿಗೆಯ ಮೌಲ್ಯಮಾಪನವು ನಿಮ್ಮ ಮುಂದಿನ ಪಾಠಗಳನ್ನು ಯೋಜಿಸಲು ನೆರವಾಗಲಿ.

# ಸಾರಾಂಶ

ಈ ಘಟಕವು ವಿದ್ಯಾರ್ಥಿಗಳ ತರಗತಿ ಕಲಿಕೆಗೆ ನೆರವಾಗುವುದಕ್ಕಾಗಿ ಅವರಿಗೆ ಮಾತನಾಡುವ ಮತ್ತು ಕೇಳುವ ಅವಕಾಶಗಳನ್ನು ಸೃಷ್ಟಿಸಲು ಕೆಲವು ಐಡಿಯಾಗಳನ್ನು ನಿಮಗೆ ಒದಗಿಸಿದೆ. ಭಾಷೆ ಮತ್ತು ವಿಷಯವಸ್ತು ಎರಡೂ ದೃಷ್ಟಿಗಳಿಂದ ವಿದ್ಯಾರ್ಥಿಗಳ ತಿಳುವಳಿಕೆ ಮತ್ತು ಪ್ರಗತಿಯನ್ನು ನೀವು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿ ಚರ್ಚೆಗಳು ಮಹತ್ವವಾಗಿವೆ ಎಂಬುದನ್ನು ತೋರಿಸಿಕೊಟ್ಟಿದೆ. ಇಂತಹ ಮಾಹಿತಿಯು ನಿಮ್ಮ ತರಗತಿ ಅಭ್ಯಾಸಕ್ರಮ ಮತ್ತು ಪಾಠಯೋಜನೆಗೆ ನೆರವಾಗಲಿದೆ. ವಿದ್ಯಾರ್ಥಿಗಳ ಮಾತನ್ನು ಕೇಳಿಸಿಕೊಳ್ಳುವುದರಿಂದ, ಅವರಿಗೆ ಅಗತ್ಯವಿರುವುದನ್ನು ಯೋಜಿಸಲು ಹಾಗೂ ಅವರ ಸಾಧನೆಯನ್ನು ಉತ್ತಮ ಪಡಿಸಲು ಸಾಧ್ಯವಾಗಲಿದೆ.

# ಸಂಪನ್ಮೂಲಗಳು

## ಸಂಪನ್ಮೂಲ 1: ಕಲಿಕೆಗಾಗಿ ಮಾತು

### ಕಲಿಕೆಗಾಗಿ ಮಾತು ಏಕೆ ಮುಖ್ಯ

ಮಾತು ಮಾನವನ ವಿಕಾಸದ ಭಾಗವಾಗಿದ್ದು, ಆಲೋಚಿಸಲು, ಕಲಿಯಲು ಹಾಗೂ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಜನರು ಭಾಷೆಯನ್ನು ತಾರ್ಕಿಕತೆ, ಜ್ಞಾನ ಮತ್ತು ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವ ಸಾಧನವಾಗಿ ಬಳಸುತ್ತಾರೆ. ಆದ್ದರಿಂದ, ವಿದ್ಯಾರ್ಥಿಗಳ ಕಲಿಕಾ ಅನುಭವಗಳ ಭಾಗವಾಗಿ ವಿದ್ಯಾರ್ಥಿಗಳನ್ನು ಮಾತನಾಡಲು ಪ್ರೋತ್ಸಾಹಿಸಿದರೆ, ಅವರ ಶೈಕ್ಷಣಿಕ ಪ್ರಗತಿಯನ್ನು ಉತ್ತಮಪಡಿಸಿದಂತೆ. ಐಡಿಯಾಗಳನ್ನು ತಿಳಿದುಕೊಳ್ಳಲಾಯಿತು ಎಂದು ಮಾತನಾಡುವುದರ ಅರ್ಥವೆಂದರೆ:

- ಆ ಐಡಿಯಾಗಳನ್ನು ಕಂಡುಕೊಳ್ಳಲಾಯಿತು
- ವಿವೇಚನಾ ಶಕ್ತಿ ಬೆಳೆಸಲಾಯಿತು, ಸಂಘಟಿಸಲಾಯಿತು
- ಹೀಗಾಗಿ, ವಿದ್ಯಾರ್ಥಿಗಳು ಹೆಚ್ಚು ಕಲಿಯುತ್ತಾರೆ

ತರಗತಿಯಲ್ಲಿ ವಿದ್ಯಾರ್ಥಿ ಮಾತನ್ನು ವಿವಿಧ ರೀತಿಯಲ್ಲಿ ಬಳಸಬಹುದಾಗಿದ್ದು, ಅದು ಕಂಠಪಾಠ-ಪುನರಾವರ್ತನೆಯಿಂದ ಉನ್ನತ ಹಂತದವರೆಗಿನ ಚರ್ಚೆಗಳಾಗಿರಬಹುದು.

ಸಾಂಪ್ರದಾಯಿಕವಾಗಿ, ವಿದ್ಯಾರ್ಥಿಗಳ ಮಾತು ಅಥವಾ ಜ್ಞಾನಕ್ಕಿಂತ ಶಿಕ್ಷಕರ ಮಾತು ಹೆಚ್ಚು ಪ್ರಧಾನವಾಗಿದ್ದು, ಹೆಚ್ಚಿನ ಮಹತ್ವವನ್ನು ಹೊಂದಿತ್ತು. ಆದರೆ, ವಿದ್ಯಾರ್ಥಿಗಳು ತಮ್ಮ ಪೂರ್ವ ಅನುಭವಗಳೊಂದಿಗೆ ಸಂಪರ್ಕ ಕಲ್ಪಿಸಿಕೊಂಡು, ಹೆಚ್ಚು ಮಾತನಾಡಲು ಹಾಗೂ ಕಲಿಯಲು, 'ಕಲಿಕೆಗಾಗಿ ಮಾತು' ಬಳಸಿಕೊಂಡು ಪಾಠಗಳನ್ನು ಯೋಜಿಸುವುದನ್ನು ಒಳಗೊಂಡಿದೆ. ಇದು ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಪ್ರಶ್ನೋತ್ತರ ಅವಧಿಗಿಂತಲೂ ಹೆಚ್ಚಿನದಾಗಿದ್ದು, ವಿದ್ಯಾರ್ಥಿಗಳ ಸ್ವಂತ ಭಾಷೆ, ಐಡಿಯಾಗಳು, ವಿವೇಚನಾಶಕ್ತಿ ಮತ್ತು ಆಸಕ್ತಿಗಳಿಗೆ ಹೆಚ್ಚಿನ ಸಮಯ ನೀಡಲಾಗುತ್ತದೆ. ನಮ್ಮಲ್ಲಿ ಅನೇಕರು ಒಂದು ಕಷ್ಟಕರ ವಿಷಯ ಅಥವಾ ಕೆಲವೊಂದನ್ನು ಕಂಡುಕೊಳ್ಳಲು ಇನ್ನೊಬ್ಬರೊಂದಿಗೆ ಮಾತನಾಡಬಯಸುತ್ತೇವೆ. ಶಿಕ್ಷಕರು, ಈ ಸಹಜ ಪ್ರವೃತ್ತಿಯ ಆಧಾರದ ಮೇಲೆ ಉತ್ತಮ ಯೋಜಿತ ಚಟುವಟಿಕೆಗಳನ್ನು ಕೈಗೊಳ್ಳಬಹುದು.

**ತರಗತಿಯಲ್ಲಿ ಕಲಿಕೆಗಾಗಿ ಮಾತು ಚಟುವಟಿಕೆಗಳ ಯೋಜನೆ**

ಮಾತನಾಡುವ ಚಟುವಟಿಕೆಗಳನ್ನು ಯೋಜಿಸುವುದು ಕೇವಲ ಸಾಕ್ಷರತೆ ಮತ್ತು ಪದಸಂಪತ್ತು ಹೆಚ್ಚಿಸುವ ಪಾಠಗಳಿಗಷ್ಟೇ ಅಲ್ಲ; ಅದು ಗಣಿತ, ವಿಜ್ಞಾನ ಮತ್ತು ಇತರ ಪಠ್ಯವಿಷಯಗಳ ಯೋಜನೆಯ ಭಾಗವಾಗಿದೆ. ಅದನ್ನು ಇಡೀ ತರಗತಿ, ಜೋಡಿ ಅಥವಾ ಗುಂಪು ಕಾರ್ಯ, ಹೊರಾಂಗಣ ಚಟುವಟಿಕೆಗಳು, ಪಾತ್ರಾಭಿನಯ ಆಧಾರಿತ ಚಟುವಟಿಕೆಗಳು, ಬರೆವಣಿಗೆ, ಓದುವಿಕೆ, ಪ್ರಾಯೋಗಿಕ ಶೋಧನೆಕಾರ್ಯ ಹಾಗೂ ಸೃಜನಶೀಲ ಕಾರ್ಯಗಳೊಂದಿಗೆ ಯೋಜಿಸಬಹುದು.

ಸೀಮಿತ ಸಾಕ್ಷರತೆ ಮತ್ತು ಸಂಖ್ಯಾಕೌಶಲಗಳನ್ನು ಹೊಂದಿರುವ ಕಿರಿಯ ವಿದ್ಯಾರ್ಥಿಗಳೂ ಕೂಡ, ಕಾರ್ಯವನ್ನು ಅವರ ಪೂರ್ವ ಅನುಭವ ಆಧರಿಸಿ ಮತ್ತು ಸಂತೋಷದಾಯಕವಾಗಿರುವಂತೆ ಯೋಜಿಸಿದಲ್ಲಿ, ಅವರು ಉನ್ನತ ಹಂತದ ಆಲೋಚನಾ ಕೌಶಲಗಳನ್ನು ಪ್ರದರ್ಶಿಸಬಲ್ಲರು. ಉದಾಹರಣೆಗೆ, ವಿದ್ಯಾರ್ಥಿಗಳು ಪಾತ್ರಾಭಿನಯದಲ್ಲಿನ ಒಂದು ಪಾತ್ರ ಅಥವಾ ಸೂತ್ರದ ಗೊಂಬೆಯ ಕುರಿತ ಸಮಸ್ಯೆಗಳಿಗೆ ಸಾಧ್ಯವಿರುವ ಪರಿಹಾರಗಳನ್ನು ಹಾಗೂ ಸಲಹೆಗಳನ್ನು ಪಟ್ಟಿಮಾಡಬಲ್ಲರು.

ವಿದ್ಯಾರ್ಥಿಗಳು ಏನನ್ನು ಕಲಿಯಬೇಕು ಮತ್ತು ಯಾವುದರ ಬಗ್ಗೆ ಆಲೋಚಿಸಬೇಕು, ಹಾಗೆಯೇ ವಿದ್ಯಾರ್ಥಿಗಳು ಯಾವ ಬಗೆಯ ಮಾತನ್ನು ಬೆಳೆಸಿಕೊಳ್ಳಬೇಕು ಎಂಬುದರ ಕುರಿತು ನೀವು ಪಾಠವನ್ನು ಯೋಜಿಸಿ. ಕೆಲವು ಬಗೆಯ ಮಾತು ಶೋಧನಾತ್ಮಕ. ಉದಾಹರಣೆಗೆ: 'ಮುಂದೆ ಏನಾಗಲಿದೆ?' 'ಇದನ್ನು ಈ ಮುಂಚೆ ನಾವು ನೋಡಿದ್ದೇವೆಯೇ?' ' ಇದು ಏನಾಗಿರಬಹುದು?' ಅಥವಾ 'ನೀವು ಹಾಗೇಕೆ ಯೋಚಿಸುತ್ತೀರಾ?'. ಇನ್ನು ಕೆಲವು ರೀತಿಯ ಮಾತು ಹೆಚ್ಚು ವಿಶ್ಲೇಷಣಾತ್ಮಕ. ಉದಾಹರಣೆಗೆ: ಐಡಿಯಾಗಳು, ಸಾಕ್ಷ್ಯಾಧಾರಗಳು ಅಥವಾ ಸಲಹೆಗಳ ಮಹತ್ವ ಪರೀಕ್ಷಿಸುವುದು.

ಎಲ್ಲಾ ವಿದ್ಯಾರ್ಥಿಗಳು ಸಂಭಾಷಣೆಯಲ್ಲಿ ಭಾಗವಹಿಸುವಂತಾಗಲು, ಚಟುವಟಿಕೆಗಳು ಆಸಕ್ತಿದಾಯಕ ಮತ್ತು ಸಂತೋಷದಾಯಕವಾಗಿರುವಂತೆ ಮಾಡಲು ಪ್ರಯತ್ನಿಸಿ. ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ, ತಪ್ಪಾಗುತ್ತದೆ ಎಂಬ ಭಾವನೆ ಬರದಂತೆ, ತಮ್ಮ ಅಭಿಪ್ರಾಯ-ಐಡಿಯಾಗಳನ್ನು ವ್ಯಕ್ತಪಡಿಸಲು ಸುರಕ್ಷಿತ ತರಗತಿ ವಾತಾವರಣ ನಿರ್ಮಿಸುವ ಅಗತ್ಯವಿದೆ.

**ವಿದ್ಯಾರ್ಥಿಗಳ ಮಾತನ್ನು ಬೆಳೆಸುವಿಕೆ**

ಕಲಿಕೆಗಾಗಿ ಮಾತು ಶಿಕ್ಷಕರಿಗೆ ಈ ರೀತಿ ಅವಕಾಶಗಳನ್ನು ಕೊಡುತ್ತದೆ.

- ವಿದ್ಯಾರ್ಥಿಗಳು ಹೇಳುವುದನ್ನು ಕೇಳಿಸಿಕೊಳ್ಳುವುದು
- ವಿದ್ಯಾರ್ಥಿಗಳ ಐಡಿಯಾಗಳನ್ನು ಪ್ರಶಂಸಿಸುವುದು ಮತ್ತು ಬೆಳೆಸುವುದು
- ವಿದ್ಯಾರ್ಥಿಗಳನ್ನು ಮುಂದುವರಿಯುವಂತೆ ಪ್ರೋತ್ಸಾಹಿಸುವುದು

ಎಲ್ಲಾ ಪ್ರತಿಕ್ರಿಯೆಗಳನ್ನು ಬರೆದುಕೊಳ್ಳುವ ಅಥವಾ ಔಪಚಾರಿಕವಾಗಿ ಮೌಲ್ಯಾಂಕನ ಮಾಡುವ ಅಗತ್ಯವಿಲ್ಲ. ಏಕೆಂದರೆ ಮಾತಿನ ಮೂಲಕ ಐಡಿಯಾಗಳನ್ನು ವಿಸ್ತರಿಸುವುದು (ಬೆಳೆಸುವುದು) ಕಲಿಕೆಯ ಮಹತ್ವದ ಭಾಗ. ಅವರ ಕಲಿಕೆ ಅವರಿಗೆ ಪ್ರಸ್ತುತವೆನಿಸಲು, ನೀವು ಅವರ ಅನುಭವ ಮತ್ತು ಐಡಿಯಾಗಳನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಬೇಕು. ಅತ್ಯುತ್ತಮವಾದ ವಿದ್ಯಾರ್ಥಿ ಮಾತು ಎಂದರೆ ಶೋಧನಾತ್ಮಕವಾದುದು. ಅಂದರೆ ವಿದ್ಯಾರ್ಥಿಗಳು ಶೋಧಿಸುವ/ಪರೀಕ್ಷಿಸುವ ಹಾಗೂ ಪರಸ್ಪರರ ಐಡಿಯಾಗಳಿಗೆ ಸವಾಲು ಹಾಕುವುದರಿಂದ ತಮ್ಮ ಪ್ರತಿಕ್ರಿಯೆಗಳ ಕುರಿತು ಆತ್ಮವಿಶ್ವಾಸ ಹೊಂದುತ್ತಾರೆ. ಗುಂಪುಗಳಲ್ಲೂ ಕೂಡ ಯಾರದೇ ಪ್ರತಿಕ್ರಿಯೆಯಾಗಿದ್ದರೂ, ಸುಮ್ಮನೆ ಒಪ್ಪಿಕೊಳ್ಳದಂತೆ ಪ್ರೋತ್ಸಾಹಿಸಬೇಕು. ಶೋಧನಾತ್ಮಕ ಪ್ರಶ್ನೆಗಳ ಮೂಲಕ ನೀವು ಇಡೀ ತರಗತಿಯಲ್ಲಿ ಆಲೋಚನೆಗಳಿಗೆ ಸವಾಲು ಹಾಕುವುದುನ್ನು ತೋರಿಸಬಹುದು. ಉದಾ: 'ಏಕೆ?' 'ಅದನ್ನು ನೀನು ಹೇಗೆ ನಿರ್ಧರಿಸಿದೆ?' ಅಥವಾ 'ಆ ಪರಿಹಾರಗಳಿಗೆ ಹೊಂದುವ ಸಮಸ್ಯೆಗಳನ್ನು ಗುರುತಿಸುವೆಯಾ?' ಹೀಗೆ – ಈ ರೀತಿ ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಗುಂಪಿಗೆ ಕೇಳುತ್ತ, ಅವರ ಪ್ರತಿಕ್ರಿಯೆಗಳನ್ನು ಕೇಳಿಸಿಕೊಳ್ಳುತ್ತ, ಅವರ ಆಲೋಚನೆಯನ್ನು ವಿಸ್ತರಿಸಬಹುದು.

ನಿಮ್ಮ ವಿದ್ಯಾರ್ಥಿಗಳ ಮಾತು, ಐಡಿಯಾಗಳು ಮತ್ತು ಅನುಭವಗಳಿಗೆ ಮಹತ್ವ ನೀಡಿ, ಮೆಚ್ಚುಗೆ ವ್ಯಕ್ತಪಡಿಸುವುದರಿಂದ ಅವರು ಪ್ರೋತ್ಸಾಹಿಸಲ್ಪಡುತ್ತಾರೆ. ಮಾತನಾಡುವಾಗ, ಗಮನವಿಟ್ಟು ಕೇಳಿಸಿಕೊಳ್ಳುವಾಗ, ಪರಸ್ಪರ ಪ್ರಶ್ನಿಸುವಾಗ ಹಾಗೂ ಮಧ್ಯೆ ಬಾಯಿಹಾಕಬಾರದೆಂದು ತಿಳಿದುಕೊಳ್ಳುವಾಗ ಅವರ ವರ್ತನೆಗಳನ್ನು ಪ್ರಶಂಶಿಸಿ. ತರಗತಿಯಲ್ಲಿ ಅವಕಾಶ ವಂಚಿತ ಸದಸ್ಯರ ಕುರಿತು ಗಮನವಿರಲಿ. ಹಾಗೆಯೇ ಅವರನ್ನು ಹೇಗೆ ಒಳಗೊಳ್ಳುವಂತೆ ಮಾಡುವುದೆಂದು ಆಲೋಚಿಸಿ. ಎಲ್ಲಾ ವಿದ್ಯಾರ್ಥಿಗಳು ಸಂಪೂರ್ಣವಾಗಿ ಭಾಗವಹಿಸುವಂತೆ ಮಾಡಲು ಬೇಕಾದ ವಿಧಾನಗಳನ್ನು ಜಾರಿಗೆ ತರಲು ಕೆಲ ಸಮಯ ಬೇಕಾಗಬಹುದು.

**ವಿದ್ಯಾರ್ಥಿಗಳು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಲು ಪ್ರೋತ್ಸಾಹಿಸಿ**

ಉತ್ತಮ ಸವಾಲಿನ ಪ್ರಶ್ನೆಗಳನ್ನು ಕೇಳುವ ಹಾಗೂ ವಿದ್ಯಾರ್ಥಿಗಳ ಐಡಿಯಾಗಳಿಗೆ ಗೌರವ, ಪ್ರಶಂಸೆ ಸಿಗುವ ವಾತಾವರಣವನ್ನು ತರಗತಿಯಲ್ಲಿ ನಿರ್ಮಿಸಿ. ವಿದ್ಯಾರ್ಥಿಗಳು ತಮ್ಮ ಐಡಿಯಾಗಳಿಗೆ ಮಹತ್ವವಿಲ್ಲ ಎಂದುಕೊಂಡರೆ ಹಾಗೂ ಅವರ ಮಾತುಗಳನ್ನು ಒಪ್ಪಿಕೊಳ್ಳುವ ಕುರಿತು ಅವರಿಗೆ ಭಯವಿದ್ದರೆ, ಅವರು ಪ್ರಶ್ನೆಗಳನ್ನು ಕೇಳುವುದಿಲ್ಲ. ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವಂತೆ ತಿಳಿಸುವುದರಿಂದ ಅವರ ಕುತೂಹಲವನ್ನು ವ್ಯಕ್ತಪಡಿಸಲು ಪ್ರೋತ್ಸಾಹನೀಡಿದಂತೆ ಆಗುತ್ತದೆ. ಅವರ ಕಲಿಕೆ ಕುರಿತು ವಿಭಿನ್ನ ರೀತಿಯಲ್ಲಿ ಆಲೋಚಿಸಲು ಹಾಗೂ ದೃಷ್ಟಿ ಕೋನವನ್ನು ಅರ್ಥಮಾಡಿಕೊಳ್ಳಲು ನಿಮಗೆ ನೆರವಾಗುತ್ತದೆ.

ನೀವು ನಿಯಮಿತವಾಗಿ ಜೋಡಿ/ಗುಂಪು ಕಾರ್ಯ ಅಥವಾ 'ವಿದ್ಯಾರ್ಥಿ ಪ್ರಶ್ನಾ ಸಮಯ' ವನ್ನು ಯೋಜಿಸುವುದರಿಂದ, ವಿದ್ಯಾರ್ಥಿಗಳು ಪ್ರಶ್ನಿಸಬಲ್ಲರು ಅಥವಾ ಸ್ಪಷ್ಟನೆ ಕೇಳಬಲ್ಲರು. ನೀವು ಹೀಗೆ ಮಾಡಬಹುದು:

- ಪಾಠದ ಅವಧಿಯಲ್ಲಿ 'ಪ್ರಶ್ನೆ ಇದ್ದಲ್ಲಿ ಕೈ ಎತ್ತಿ' ಭಾಗವನ್ನು ಸೇರಿಸಿಕೊಳ್ಳಿ
- ಒಬ್ಬ ವಿದ್ಯಾರ್ಥಿ/ನಿ ಯನ್ನು 'hot seat' ನಲ್ಲಿ ಕೂರಿಸಿ, ಇತರ ವಿದ್ಯಾರ್ಥಿಗಳು ಅವನ/ಳನ್ನು ಉದಾ: ಶ್ರೀನಿವಾಸ ರಾಮಾನುಜಮ್ ಅಥವಾ ಅಕ್ಕಮಹಾದೇವಿಯ ಪಾತ್ರವೆಂದು ಭಾವಿಸಿ, ಪ್ರಶ್ನಿಸಲು ಪ್ರೋತ್ಸಾಹಿಸಿ.
- 'ಹೆಚ್ಚು ಹೇಳು' (Tell me more) ಆಟವನ್ನು ಜೋಡಿ/ಚಿಕ್ಕ ಗುಂಪುಗಳಲ್ಲಿ ಆಡಿ
- ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ 'ಪ್ರಶ್ನಾ ಚೌಕಟ್ಟ'ನ್ನು ಕೊಡಿ. (ಯಾರು/ಏನು/ಎಲ್ಲಿ/ಯಾವಾಗ/ಏಕೆ ಪ್ರಶ್ನೆಗಳಿರುವಂತೆ ತಯಾರಿಸಿ)
- ವಿದ್ಯಾರ್ಥಿಗಳಿಗೆ ಕೆಲವು ದತ್ತಾಂಶಗಳನ್ನು ಕೊಡಿ. (ಉದಾ: ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ, ಪೌಷ್ಟಿಕತೆ ಕೊರತೆ ಹೊಂದಿರುವ ಮಕ್ಕಳ ಶೇಕಡ ಪ್ರಮಾಣ ಇತ್ಯಾದಿ ಹಾಗೂ ಈ ಕುರಿತು ಅವರು ಕೇಳಬೇಕೆನ್ನುವ ಪ್ರಶ್ನೆಗಳನ್ನು ಆಲೋಚಿಸುವಂತೆ ಹೇಳಿ.)
- ಪ್ರತಿ ವಾರ ವಿದ್ಯಾರ್ಥಿಗಳ ಪ್ರಶ್ನೆಗಳ ಪಟ್ಟಿ ಇರುವ 'ಪ್ರಶ್ನಾ ಗೋಡೆ' ಯನ್ನು ಯೋಜಿಸಿ.

ವಿದ್ಯಾರ್ಥಿಗಳು ಪ್ರಶ್ನೆ ಕೇಳಲು ಮತ್ತು ಉತ್ತರಿಸಲು ಯಾವುದೇ ನಿರ್ಬಂಧವಿಲ್ಲದಿದ್ದಾಗ, ಅವರ ಆಸಕ್ತಿ ಮತ್ತು ಆಲೋಚನಾ ಮಟ್ಟ ಕುರಿತು ನಿಮಗೆ ತುಂಬಾ ಆಶ್ಚರ್ಯವಾಗಬಹುದು. ವಿದ್ಯಾರ್ಥಿಗಳು ಸ್ಪಷ್ಟವಾಗಿ ಹಾಗೂ ನಿಖರವಾಗಿ ಸಂವಹನ ಮಾಡುವ ರೀತಿಯನ್ನು ಕಲಿಯುವಾಗ, ಅವರು ಅವರ ಮೌಖಿಕ ಮತ್ತು ಲಿಖಿತ ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳವುದಷ್ಟೇ ಅಲ್ಲದೆ, ಹೊಸ ಜ್ಞಾನ ಮತ್ತು ಕೌಶಲಗಳನ್ನು ಗಳಿಸಿಕೊಳ್ಳುತ್ತಾರೆ.

## ಸಂಪನ್ಮೂಲ 2: ಆಲೋಚನೆಯನ್ನು ಉತ್ತೇಜಿಸಲು ಪ್ರಶ್ನಿಸುವಿಕೆಯ ಬಳಕೆ

ಸಾಮಾನ್ಯವಾಗಿ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಶ್ನಿಸುತ್ತಾರೆ; ಪ್ರಶ್ನಿಸುವುದರಿಂದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಕಲಿಯಲು ಸಹಾಯ ಮಾಡಬಹುದು. ಸರಾಸರಿಯಂತೆ, ಒಂದು ಅಧ್ಯಯನದಂತೆ, ಒಬ್ಬ ಶಿಕ್ಷಕ/ಕಿ ತಮ್ಮ ಮೂರನೇ ಒಂದು ಸಮಯವನ್ನು ಪ್ರಶ್ನಿಸುವಿಕೆಗಾಗಿ ಉಪಯೋಗಿಸುತ್ತಾರೆ ( Hastings,2003). ಕೇಳಿದ ಪ್ರಶ್ನೆಗಳಲ್ಲಿ ಶೇಕಡ 60 ಭಾಗ ವಾಸ್ತವಾಂಶ (facts) ಸಂಬಂಧಿಸಿದಂತೆ ಸ್ಮರಿಸಿಕೊಳ್ಳುವ ಹಾಗೂ 20 ಭಾಗ ಮಾತ್ರ ಕಾರ್ಯವಿಧಾನ ಕುರಿತ ಪ್ರಶ್ನೆಗಳಾಗಿದ್ದು (Hattie, 2012), ಬಹುತೇಕ ಸರಿ ಅಥವಾ ತಪ್ಪು ಉತ್ತರ ಮಾದರಿಯವು. ಆದರೆ ಹೀಗೆ ಸರಿ ಅಥವಾ ತಪ್ಪು ಮಾದರಿಯ ಪ್ರಶ್ನೆಗಳು ಕಲಿಕೆಯನ್ನು ಉತ್ತೇಜಿಸುತ್ತವೆಯೇ?

ವಿದ್ಯಾರ್ಥಿಗಳು ಕೇಳುವಂತಹ ಪ್ರಶ್ನೆಗಳಲ್ಲಿ ಹಲವು ಬಗೆಗಳಿವೆ. ಶಿಕ್ಷಕರಿಗೆ ಬೇಕಾಗಿರುವ ಪ್ರತಿಕ್ರಿಯೆ ಮತ್ತು ಫಲಿತಾಂಶಗಳಿಗೆ ಅನುಸಾರವಾಗಿ ಅವರು ಯಾವ ಬಗೆಯ ಪ್ರಶ್ನೆಯನ್ನು ಬಳಸಿಕೊಳ್ಳಬೇಕೆಂದು ಸೂಚಿಸುತ್ತದೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳಿಗಾಗಿ ಪ್ರಶ್ನೆ ಕೇಳುತ್ತಾರೆ:

- ಹೊಸ ವಿಷಯ ವಸ್ತುವನ್ನು ಪರಿಚಯಿಸುವಾಗ ವಿದ್ಯಾರ್ಥಿಗಳ ತಿಳುವಳಿಕೆಗಾಗಿ ಮಾರ್ಗದರ್ಶನ ಮಾಡುವುದು
- ತಮ್ಮ ಆಲೋಚನೆಯ ಹೆಚ್ಚಿನ ಭಾಗವನ್ನು ವಿದ್ಯಾರ್ಥಿಗಳು ಹಂಚಿಕೊಳ್ಳುವಂತೆ ಮಾಡುವುದು
- ಒಂದು ತಪ್ಪನ್ನು ಪರಿಹರಿಸುವುದು
- ವಿದ್ಯಾರ್ಥಿಗಳ ಮಿತಿಗಳನ್ನು ವಿಸ್ತರಿಸುವುದು
- ಅವರ ತಿಳುವಳಿಕೆಯನ್ನು ಅರ್ಥಮಾಡಿಕೊಳ್ಳುವುದು

ಪ್ರಶ್ನಿಸುವಿಕೆಯನ್ನು ಸಾಮಾನ್ಯವಾಗಿ ವಿದ್ಯಾರ್ಥಿಗಳು ಏನು ತಿಳಿದುಕೊಂಡಿದ್ದಾರೆ ಎಂದು ಪತ್ತೆ ಮಾಡಲು ಬಳಸಲಾಗುತ್ತದೆ. ಆದ್ದರಿಂದ ಅದು ಅವರ ಪ್ರಗತಿಯನ್ನು ಮೌಲ್ಯಾಂಕನ ಮಾಡುವಲ್ಲಿ ಬಹಳ ಮುಖ್ಯ. ಅಲ್ಲದೆ ಸ್ಫೂರ್ತಿ ತುಂಬಲು, ವಿದ್ಯಾರ್ಥಿಗಳ ಆಲೋಚನಾ ಕೌಶಲಗಳನ್ನು ವಿಸ್ತರಿಸಲು ಹಾಗೂ ಪ್ರಶ್ನಿಸುವ ಮನೋಭಾವ ಬೆಳೆಸಲು ಪ್ರಶ್ನೆಗಳನ್ನು ಉಪಯೋಗಿಸಲಾಗುತ್ತದೆ. ಅವುಗಳನ್ನು ಎರಡು ವಿಶಾಲ ವರ್ಗಗಳಾಗಿ ವಿಂಗಡಿಸಬಹುದು.

- ಕೆಳ ಹಂತದ ಪ್ರಶ್ನೆಗಳು, ಈಗಾಗಲೇ ಬೋಧಿಸಲ್ಪಟ್ಟ ಸಂಗತಿಗಳು ಮತ್ತು ಜ್ಞಾನವನ್ನು ಸ್ಮರಿಸಿಕೊಳ್ಳುವುದನ್ನು ಒಳಗೊಂಡಿದ್ದು, ಆವೃತ ಪ್ರಶ್ನೆಗಳಾಗಿರುತ್ತವೆ (ಹೌದು ಅಥವಾ ಇಲ್ಲ ಉತ್ತರ ಕೊಡುವ)
- ಉನ್ನತ ಹಂತದ ಪ್ರಶ್ನೆಗಳು, ಹೆಚ್ಚಿನ ಆಲೋಚನೆ ಬಯಸುತ್ತವೆ. ವಿದ್ಯಾರ್ಥಿಗಳು ಈಗಾಗಲೇ ತಿಳಿದಿರುವ ಮಾಹಿತಿಯನ್ನು ಒಟ್ಟುಗೂಡಿಸಿ, ಅಥವಾ ತಾರ್ಕಿಕವಾಗಿ ತಮ್ಮ ವಾದಕ್ಕೆ ಪೂರಕವಾಗಿ ಉತ್ತರಿಸಲು ಕೇಳಬಹುದು. ಈ ಪ್ರಶ್ನೆಗಳು ಹೆಚ್ಚು ಮುಕ್ತಾಂತ ಪ್ರಶ್ನೆಗಳು (open ended).

ಮುಕ್ತಾಂತ ಪ್ರಶ್ನೆಗಳು ಪಠ್ಯಪುಸ್ತಕ ಆಧಾರಿತ, ಮೂಲ ಪದಾನುಸಾರವಾದ ಉತ್ತರಗಳಿಂದಾಚೆಗೆ ವಿದ್ಯಾರ್ಥಿಗಳು ಆಲೋಚಿಸುವಂತೆ ಪ್ರೋತ್ಸಾಹಿಸುತ್ತವೆ. ಆದ್ದರಿಂದ ಪ್ರತಿಕ್ರಿಯೆಗಳು ವಿಸ್ತೃತವಾಗಿರುತ್ತವೆ. ಇವು ಶಿಕ್ಷಕರಿಗೆ ವಿದ್ಯಾರ್ಥಿಗಳ ವಿಷಯದ ತಿಳುವಳಿಕೆಯನ್ನು ಮೌಲ್ಯಾಂಕನ ಮಾಡಲು ನೆರವಾಗುತ್ತವೆ.

### ವಿದ್ಯಾರ್ಥಿಗಳು ಪ್ರತಿಕ್ರಿಯಿಸಲು ಪ್ರೋತ್ಸಾಹಿಸುವಿಕೆ

ಅನೇಕ ಶಿಕ್ಷಕರು ಪ್ರಶ್ನೆಕೇಳಿದ ಮೇಲೆ ಉತ್ತರಿಸಲು ಒಂದು ಸೆಕೆಂಡಿಗಿಂತಲೂ ಕಡಿಮೆ ಸಮಯವನ್ನು ನೀಡುತ್ತಾರೆ. ಆದ್ದರಿಂದ ಆಗಾಗ್ಗೆ ತಾವೆ ಉತ್ತರಿಸುತ್ತಾರೆ ಅಥವಾ ಪ್ರಶ್ನೆಯನ್ನು ಪುನರ್ರಚಿಸುತ್ತಾರೆ (Hastings, 2003) ವಿದ್ಯಾರ್ಥಿಗಳಿಗೆ ಪ್ರತಿಕ್ರಿಯೆ ತೋರಲಷ್ಟೆ ಸಮಯವಿರುತ್ತದೆ - ಆಲೋಚಿಸಲು ಇರುವುದಿಲ್ಲ! ಕೆಲವು ಸೆಕೆಂಡ್ ಗಳ ಕಾಲ ಕಾಯುವುದರಿಂದ, ವಿದ್ಯಾರ್ಥಿಗಳಿಗೆ ಆಲೋಚಿಸಲು ಸಮಯ ಸಿಗಲಿದೆ. ಇದು ವಿದ್ಯಾರ್ಥಿಗಳ ಸಾಧನೆಯ ಮೇಲೆ ಧನಾತ್ಮಕ ಪರಿಣಾಮ ಹೊಂದಿದೆ. ಪ್ರಶ್ನೆ ಕೇಳಿದ ಮೇಲೆ ಕಾಯುವುದರಿಂದ, ಈ ರೀತಿ ಪ್ರಗತಿ ಕಂಡುಬಂದಿದೆ.

- ವಿದ್ಯಾರ್ಥಿಗಳ ಪ್ರತಿಕ್ರಿಯೆಗಳ ಉದ್ದ
- ಪ್ರತಿಕ್ರಿಯಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ
- ವಿದ್ಯಾರ್ಥಿಗಳ ಪ್ರಶ್ನೆಗಳ ಆವರ್ತನ
- ಕಡಿಮೆ ಸಾಮರ್ಥ್ಯದ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಗಳ ಸಂಖ್ಯೆ
- ವಿದ್ಯಾರ್ಥಿಗಳ ನಡುವೆ ಧನಾತ್ಮಕ ಒಡನಾಟ

### ನಿಮ್ಮ ಪ್ರತಿಕ್ರಿಯೆ ಮಹತ್ವದ್ದು

ಕೊಟ್ಟ ಉತ್ತರಗಳನ್ನು ನೀವು ಎಷ್ಟು ಹೆಚ್ಚು ಧನಾತ್ಮಕವಾಗಿ ಸ್ವೀಕರಿಸುತ್ತೀರೋ, ಅಷ್ಟು ಹೆಚ್ಚು ವಿದ್ಯಾರ್ಥಿಗಳು ಆಲೋಚಿಸಿ, ಪ್ರಯತ್ನಿಸಲು ಮುಂದುವರಿಯುತ್ತಾರೆ. ತಪ್ಪು ಉತ್ತರ ಮತ್ತು ತಪ್ಪು ಕಲ್ಪನೆಗಳನ್ನು ಸರಿಪಡಿಸಲು ಹಲವು ಮಾರ್ಗಗಳಿವೆ. ಒಂದು ವೇಳೆ, ಒಬ್ಬ ವಿದ್ಯಾರ್ಥಿ/ನಿ ತಪ್ಪು ಐಡಿಯಾ ಹೊಂದಿದ್ದರೆ, ಇನ್ನೂ ಹಲವರು ಹೊಂದಿದ್ದಾರೆ ಎಂದರ್ಥ. ನೀವು ಈ ಕೆಳಗಿನವುಗಳನ್ನು ಪ್ರಯತ್ನಿಸಿ:

- ಸರಿ ಇರುವ ಉತ್ತರಗಳ ಭಾಗಗಳನ್ನು ಆಯ್ದುಕೊಂಡು, ಅವುಗಳಿಗೆ ಪೂರಕವಾಗಿ, ಇನ್ನೂ ಹೆಚ್ಚು ಆಲೋಚಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿ. ಇದು ಹೆಚ್ಚು ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ, ಹಾಗೂ ವಿದ್ಯಾರ್ಥಿಗಳು ಅವರ ತಪ್ಪುಗಳಿಂದ ಕಲಿಯುವಂತೆ ಸಹಾಯ ಮಾಡುತ್ತದೆ. ಒಂದು ಸರಿಯಲ್ಲದ ಉತ್ತರಕ್ಕೆ ಬೆಂಬಲಯುತವಾಗಿ ಹೇಗೆ ನೀವು ಪ್ರತಿಕ್ರಿಯಿಸಬಹುದೆಂದು ಈ ಮುಂದಿನ ಮಾತು ತಿಳಿಸುತ್ತದೆ:
- ಆವಿಯಾಗಿ ಹೋಗಿ ಮೋಡವಾಗುವುದರ ಕುರಿತು ನೀನು ಹೇಳಿದ್ದು ಸರಿ, ಆದರೆ ನೀನು ಮಳೆ ಬೀಳುವುದರ ಕುರಿತು ಹೇಳಿದ ವಿಚಾರವಾಗಿ ಇನ್ನು ಹೆಚ್ಚು ಆಲೋಚಿಸುವ ಅಗತ್ಯವಿದೆ. ಬೇರೆ ಯಾರಾದರೂ ಕೆಲವು ಐಡಿಯಾಗಳನ್ನು ಕೊಡುವಿರಾ?

- ವಿದ್ಯಾರ್ಥಿಗಳು ಕೊಡುವ ಎಲ್ಲಾ ಉತ್ತರಗಳನ್ನು ಕಪ್ಪುಹಲಗೆಯ ಮೇಲೆ ಬರೆಯಿರಿ. ನಂತರ ಅವುಗಳ ಕುರಿತು ಆಲೋಚಿಸಲು ಹೇಳಿ. ಯಾವ ಉತ್ತರಗಳು ಸರಿ ಎಂದು ಆಲೋಚಿಸುತ್ತಾರೆ? ಇನ್ನೊಂದು ಉತ್ತರ ಕೊಡಲು ಯಾವುದು ಕಾರಣವಾಯಿತು? ಇದು ನಿಮ್ಮ ವಿದ್ಯಾರ್ಥಿಗಳು ಆಲೋಚಿಸುವ ರೀತಿಯನ್ನು ತಿಳಿದುಕೊಳ್ಳಲು ಒಂದು ಅವಕಾಶವನ್ನು ಹಾಗೂ ಅವರಿಗಿರುವ ಯಾವುದೇ ತಪ್ಪು ಕಲ್ಪನೆಯನ್ನು ಸರಿಪಡಿಸಿಕೊಳ್ಳಲು ಒಂದು ನಿರ್ಭೀತಕ್ರಮವನ್ನು ಒದಗಿಸುತ್ತದೆ.

ಗಮನವಿಟ್ಟು ಕೇಳುವ ಮೂಲಕ ಮತ್ತು ಅವುಗಳ ಕುರಿತು ಇನ್ನು ಹೆಚ್ಚು ವಿವರಣೆ ನೀಡಲು ವಿದ್ಯಾರ್ಥಿಯನ್ನು ಕೇಳುವ ಮೂಲಕ ಎಲ್ಲಾ ಪ್ರತಿಕ್ರಿಯೆಗಳನ್ನು ಗೌರವಿಸಿ. ಸರಿ ಅಥವಾ ತಪ್ಪೇ ಇರಲಿ, ನೀವು ಎಲ್ಲ ಉತ್ತರಗಳಿಗೂ ಹೆಚ್ಚಿನ ವಿವರಣೆ ಕೇಳಿದಲ್ಲಿ, ವಿದ್ಯಾರ್ಥಿಗಳು ಯಾವುದೇ ತಪ್ಪನ್ನು ತಮ್ಮಷ್ಟಕ್ಕೆ ತಾವೇ ಸರಿಪಡಿಸಿಕೊಳ್ಳುತ್ತಾರೆ. ನೀವು ಹೀಗೆ ಒಂದು ಆಲೋಚನಾ ತರಗತಿಯನ್ನು ಬೆಳೆಸುತ್ತೀರಿ. ವಿದ್ಯಾರ್ಥಿಗಳು ಕಲಿತಿರುವ ಅಂಶಗಳು ಮತ್ತು ಮುಂದುವರಿಯಬೇಕಾದ ರೀತಿ ನಿಜವಾಗಿ ನಿಮಗೆ ತಿಳಿಯುತ್ತದೆ. ತಪ್ಪು ಉತ್ತರಗಳಿಗೆ ಅವಮಾನ ಅಥವಾ ಶಿಕ್ಷೆ ವಿಧಿಸಿದರೆ, ವಿದ್ಯಾರ್ಥಿಗಳು ಹೆಚ್ಚಿನ ಅವಮಾನ, ಅಪಹಾಸ್ಯಕ್ಕೀಡಾಗುವ ಭಯದಿಂದ ಪ್ರಯತ್ನಿಸುವುದನ್ನೇ ಬಿಟ್ಟು ಬಿಡುತ್ತಾರೆ.

**ಪ್ರತಿಕ್ರಿಯೆಗಳ ಗುಣಮಟ್ಟವನ್ನು ಉತ್ತಮ ಪಡಿಸುವಿಕೆ**

ಸರಿ ಉತ್ತರದಿಂದ ಕೊನೆಗೊಳ್ಳದ ಪ್ರಶ್ನಿಸುವಿಕೆಯ ಕ್ರಮವನ್ನು ನೀವು ಅಳವಡಿಸಿಕೊಳ್ಳುವುದು ಮುಖ್ಯ. ಸರಿ ಉತ್ತರಗಳು ಜ್ಞಾನ ವಿಸ್ತಾರ ಮಾಡುವಂತಹ ಅನುಪಾಲನಾ ಪ್ರಶ್ನೆಗಳಿಂದ ಗೌರವಿಸಲ್ಪಡಬೇಕು ಹಾಗೂ ಶಿಕ್ಷಕರೊಂದಿಗೆ ಮಾತಿಗಿಳಿಯಲು ಒಂದು ಅವಕಾಶವನ್ನು ಒದಗಿಸಬೇಕು. ಅದಕ್ಕಾಗಿ ನೀವು ಹೀಗೆ ಕೇಳ/ಮಾಡಬಹುದು:

- ಹೇಗೆ ಅಥವಾ ಏಕೆ
- ಉತ್ತರಿಸುವ ಇನ್ನೊಂದು ರೀತಿ
- ಅದಕ್ಕಿಂತ ಇನ್ನೊಂದು ಉತ್ತಮವಾದ ಪದ
- ಉತ್ತರವನ್ನು ಸಮರ್ಥಿಸಲು ಸಾಕ್ಷ್ಯಾಧಾರ
- ಸಂಬಂಧಿತ ಕೌಶಲದ ಸಮನ್ವಯ
- ಅದೇ ಕೌಶಲದ ಅನ್ವಯ ಅಥವಾ ಹೊಸ ಸಂದರ್ಭದಲ್ಲಿ ಬಳಕೆ

ವಿದ್ಯಾರ್ಥಿಗಳು ತಮ್ಮ ಉತ್ತರಗಳ ಕುರಿತು ಹೆಚ್ಚು ಆಳವಾಗಿ ಆಲೋಚಿಸುವಂತೆ ಸಹಾಯ ಮಾಡುವುದೇ (ಹೀಗೆ ಮಾಡುವುದರಿಂದ ಅವರ ಉತ್ತರದ ಗುಣಮಟ್ಟ ಸುಧಾರಿಸುವುದು) ನಿಮ್ಮ ಪಾತ್ರದ ಬಹುಮುಖ್ಯ ಭಾಗ. ಈ ಮುಂದಿನ ಕೌಶಲಗಳು ವಿದ್ಯಾರ್ಥಿಗಳು ಹೆಚ್ಚು ಸಾಧಿಸಲು ಸಹಾಯಮಾಡುತ್ತವೆ:

*ಸುಳಿವು ನೀಡುವಿಕೆ:* ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ಉತ್ತಮ ಪಡಿಸಿಕೊಳ್ಳುವುದಕ್ಕಾಗಿ ಬೇಕಾದ ಸೂಕ್ತ ಸುಳಿವುಗಳನ್ನು ನೀಡುವುದು. ಉತ್ತರದಲ್ಲಿ ಸರಿ ಇರುವುದನ್ನು ಮೊದಲಿಗೆ ಆಯ್ಕೆಮಾಡಿ, ನಂತರ ಮಾಹಿತಿ ನೀಡಿ, ತದನಂತರ ಪ್ರಶ್ನೆ ಸುಳಿವುಗಳನ್ನು ನೀವು ನೀಡಬಹುದು. (ಹಾಗೇ ನಿಮ್ಮ ಕಾಗದದ ವಿಮಾನದ ತುದಿಗೆ ಹೆಚ್ಚು ಭಾರ ಸೇರಿಸಿದರೆ, ಏನಾಗಲಿದೆ?')

*ಶೋಧಿಸುವಿಕೆ:* ಎನ್ನುವುದು ವಿದ್ಯಾರ್ಥಿಗಳು ಭಾಗಶ: ಸರಿ ಇರುವ ಅಥವಾ ಹೇಳುವಿಕೆಯಲ್ಲಿ ಅಸಂಘಟಿತವಾಗಿರುವುದನ್ನು ಸ್ಪಷ್ಟಪಡಿಸಿ, ಉತ್ತಮ ಪಡಿಸುವ ಸಲುವಾಗಿ ಸಹಾಯಮಾಡುವುದೇ ಆಗಿದೆ. ('ಇದು ಹೇಗೆ ಒಟ್ಟಾಗಿ ಹೊಂದಿಕೊಳ್ಳುತ್ತದೆ ಎಂಬುದರ ಬಗ್ಗೆ ಇನ್ನು ಹೆಚ್ಚು ಹೇಳಬಹುಸುತ್ತೀಯಾ?')

*ಮರುಕೇಂದ್ರೀಕರಣ:* ಸರಿ ಉತ್ತರಗಳನ್ನು ವಿದ್ಯಾರ್ಥಿಗಳ ಜ್ಞಾನಕ್ಕೆ, ಅವರು ಈಗಾಗಲೇ ಕಲಿತಿರುವ ಜ್ಞಾನದೊಂದಿಗೆ ಬೆಸೆಯುವುದೇ ಮರುಕೇಂದ್ರೀಕರಣ. ಇದು ಅವರ ತಿಳುವಳಿಕೆಯನ್ನು ವಿಸ್ತಾರಗೊಳಿಸುತ್ತದೆ. ('ನೀನು ಹೇಳಿದ್ದು ಸರಿ ಇದೆ. ಆದರೆ, ಕಳೆದವಾರ ನಾವು ನೋಡಿದ ಸ್ಥಳೀಯ ಪರಿಸರ ವಿಷಯದೊಂದಿಗೆ ಇದು ಹೇಗೆ ಸಂಬಂಧಿಸಿದೆ?')

*ಅನುಕ್ರಮಗೊಳಿಸುವಿಕೆ:* ಪ್ರಶ್ನೆಗಳು ಆಲೋಚನೆಯನ್ನು ವಿಸ್ತರಿಸಲು ವಿನ್ಯಾಸಗೊಳಿಸಿದ್ದು, ಕ್ರಮವಾದ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳುವುದೇ ಆಗಿದೆ. ಪ್ರಶ್ನೆಗಳು ವಿದ್ಯಾರ್ಥಿಗಳಿಗೆ ಸಾರಂಶೀಕರಿಸಲು, ಹೋಲಿಸಲು, ವಿವರಿಸಲು, ಅಥವಾ ವಿಶ್ಲೇಷಿಸಲು ಅವಕಾಶ ಮಾಡಿಕೊಡಬೇಕು.

ವಿದ್ಯಾರ್ಥಿಗಳನ್ನು ಬಲಗೊಳಿಸುವಂತೆ ಪ್ರಶ್ನೆಗಳನ್ನು ರಚಿಸಿ.  ಆದರೆ ಪ್ರಶ್ನೆಗಳ ಅರ್ಥವನ್ನು ಅವರು ಕಳೆದುಕೊಳ್ಳುವಂತೆ ಸವಾಲು ಹಾಕಬೇಡಿ. ('ನಿನ್ನ ಮುಂಚಿನ ಸಮಸ್ಯೆಯನ್ನು ಹೇಗೆ ಬಿಡಿಸಿದೆ ಎಂಬುದನ್ನು ವಿವರಿಸು.  ಅದು ಮಾಡಿದ ವಿಶೇಷತೆ ಏನು? ಮುಂದೆ ನೀನು ಎದುರಿಸಬೇಕಾದುದು ಏನೆಂದು ನಿನಗೆ ಅನ್ನಿಸುತ್ತಿದೆ?')

*ಆಲಿಸುವಿಕೆ*: ನೀವು ಬಯಸುವ ಉತ್ತರವಷ್ಟೇ ಅಲ್ಲದೆ, ನೀವು ನಿರೀಕ್ಷಿಸದೇ ಇರುವ ಮಾಮೂಲಿಯಲ್ಲದ, ನವೀನವಾದ ಉತ್ತರಗಳಿಗೆ ಎಚ್ಚರದಿಂದಿರಲು ಸಹಾಯಮಾಡುತ್ತದೆ.  ಅಲ್ಲದೆ ಅದು ನಿಮ್ಮ ವಿದ್ಯಾರ್ಥಿಗಳ ಆಲೋಚನೆಯನ್ನು  ನೀವು ಗೌರವಿಸುತ್ತೀರಿ ಎಂಬುದನ್ನು ತೋರಿಸುತ್ತದೆ.  ಆದ್ದರಿಂದ ಅವರು ಆಲೋಚನಾತ್ಮಕ ಪ್ರತಿಕ್ರಿಯೆಗಳನ್ನು ಹೆಚ್ಚು ನೀಡುವ ಸಾಧ್ಯತೆ ಇರುತ್ತದೆ.  ಈ ರೀತಿಯ ಉತ್ತರಗಳು ಸರಿಮಾಡಬೇಕಾದ ತಪ್ಪು ಕಲ್ಪನೆಗಳನ್ನು ತೋರಿಸಿಕೊಡುತ್ತವೆ, ಅಥವಾ ನೀವು ಪರಿಗಣಿಸಿದೆ ಹೊಸ ಮಾರ್ಗವನ್ನು ತೋರಿಸಿಕೊಡಬಹುದು. ('ನಾನು ಹಾಗೇ ಯೋಚಿಸಿರಲಿಲ್ಲ. ನೀನು ಏಕೆ ಹಾಗೇ ಯೋಚಿಸುತ್ತೀಯಾ ಎಂದು ನನಗೆ ಇನ್ನಷ್ಟು ಹೇಳು')

ಶಿಕ್ಷಕರಾಗಿ, ನೀವು ನಿಮ್ಮ ವಿದ್ಯಾರ್ಥಿಗಳಿಂದ ಆಸಕ್ತಿಯುತ, ನವೀನ ಉತ್ತರಗಳನ್ನು ಪಡೆಯಬೇಕಾದಲ್ಲಿ, ಸ್ಫೂರ್ತಿತುಂಬುವ ಮತ್ತು ಸವಾಲಾಗಿರುವ ಪ್ರಶ್ನೆಗಳನ್ನು ಕೇಳಬೇಕು. ಅವರಿಗೆ ಆಲೋಚಿಸಲು ಸಮಯ ಕೊಟ್ಟಾಗ ಅವರಿಗೆ ಎಷ್ಟು ತಿಳಿದಿದೆ ಎಂದು ನೀವು ಆಶ್ಚರ್ಯ ಪಡುವುದಲ್ಲದೇ ಅವರ ಕಲಿಕೆಯ ಪ್ರಗತಿಯನ್ನು ಸಾಧಿಸಲು ನೀವೆಷ್ಟು ಉತ್ತಮವಾಗಿ ಸಹಾಯಮಾಡಬಲ್ಲಿರಿ ಎಂದು ತಿಳಿಯುವಿರಿ.

ನೆನಪಿಡಿ, ಪ್ರಶ್ನಿಸುವುದು ಶಿಕ್ಷಕರು ತಿಳಿದಿರುವುದರ ಕುರಿತು ಅಲ್ಲ. ಅದು ವಿದ್ಯಾರ್ಥಿಗಳು ತಿಳಿದಿರುವುದರ ಕುರಿತು.  ನೀವು ನಿಮ್ಮ ಪ್ರಶ್ನೆಗಳಿಗೆ ಎಂದಿಗೂ ಉತ್ತರಿಸಬಾರದು ಎಂಬುದನ್ನು ನೆನಪಿಡುವುದು ಬಹಳ ಮುಖ್ಯ! ನಿಮ್ಮ ವಿದ್ಯಾರ್ಥಿಗಳಿಗೆ ನೀವು ಕೆಲವು ಮೌನದ ಸೆಕೆಂಡ್ ಗಳ ಬಳಿಕ ಉತ್ತರಿಸುತ್ತೀರಿ ಎಂದು ಗೊತ್ತಾಗಿಬಿಟ್ಟರೆ, ಅವರಿಗೆ ಉತ್ತರಿಸಲು ಪ್ರೇರಕವಾದರೂ ಏನು?

## ಹೆಚ್ಚಿನ ಸಂಪನ್ಮೂಲಗಳು

- A selection of multilingual activities: http://mlenetwork.org/content/activities-early-grades-mother-tongue-l1-based-multilingual-education-programs
- The Rishi Valley rural education programme has published a number of different resources, some of which include pictures, poems in state and local languages: http://rishivalley.org/publications/list_of_titles.htm
- Some stories from Rishi Valley told in Hindi with downloadable written version and worksheets: http://rishivalley.org/rvite/Stories%20with%20Worksheets.htm
- Articles from Rishi Valley in Hindi and English about teaching Hindi to children: http://rishivalley.org/rvite/articles_teaching_hindi_children.htm

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ


Barnes, D. (1992) *From Communication to Curriculum*, 2nd edn. Portsmouth, NH: Boynton/Cook-Heinemann.

Barnes, D. (2008) 'Exploratory talk for learning' in Mercer, N. and Hodgkinson, S. (eds) *Exploring Talk in School*. London: Sage Publications, pp.1–15.

Fisher, D., Frey, N. and Rothenberg, C. (2008) 'Procedures for classroom talk', Chapter 5 in *Content Area Conversations: How to Plan Discussion-Based Lessons for Diverse Language Learners*. Alexandria, VA: Association for Supervision and Curriculum Development. Available from: http://www.ascd.org/publications/books/108035/chapters/Procedures-for-Classroom-Talk.aspx (accessed 28 October 2014).

Genishi, C. (undated) 'Young children's oral language development' (online), Reading Rockets. Available from: http://www.readingrockets.org/article/383 (accessed 28 October 2014).

Hastings, S. (2003) 'Questioning', *TES Newspaper*, 4 July. Available from: http://www.tes.co.uk/article.aspx?storycode=381755 (accessed 22 September 2014).

Hattie, J. (2012) *Visible Learning for Teachers: Maximising the Impact on Learning*. Abingdon: Routledge.

Higgins, S. (2001a) 'Developing thinking skills in the primary classroom' (online), paper presented at the Register of Primary Research Seminar Conference 'Raising Achievement: Developing Thinking Skills', Education-Line, 27 October. Available from: http://www.leeds.ac.uk/educol/documents/140953.htm (accessed 28 October 2014).

Higgins, S. (2001b) *Thinking Through Primary Teaching*. Cambridge, UK: Chris Kington Publishing.

McCandlish S. (2012) 'Taking a "slice" of the oral language pie: an approach for developing oral language in schools' (online). Available from: http://www.decd.sa.gov.au/northernadelaide/files/links/Taking_a_slice_of_Oral_Lan.pdf (accessed 28 October 2014).

Mercer, N. (1995) *The Guided Construction of Knowledge: Talk Amongst Teachers and Learners*. Clevedon: Multilingual Matters.

Neaum, S. (2012) *Language and Literacy for the Early Years*. London: Sage.

Prince, A.W. (undated) 'Promoting oral language development in young children' (online), Super Duper Publications. Available from: http://www.superduperinc.com/handouts/pdf/120_oral_language_development.pdf (accessed 28 October 2014).

Roskos, K.A., Tabors, P.O. and, Lenhart, L. A. (2009) *Oral Language and Early Literacy in Preschool: Talking, Reading, and Writing*, 2nd edn. International Reading Association . Available from: http://www.reading.org/Libraries/books/bk693-1-Roskos.pdf (accessed 28 October 2014).

Vygotsky, L.S. (1962) *Thought and Language*. Cambridge, MA: MIT Press. For a brief summary of Vygotsky's ideas on thought and language and the differences between his and Piaget's ideas, see: http://www.simplypsychology.org/vygotsky.html (accessed 28 October 2014).

Wells, G. (1993) 'Reevaluating the IRF sequence', *Linguistics and Education*, no. 5, pp. 1–37.

## ಕೃತಜ್ಞತೆಗಳು

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 1:  left, 'My Village' and right, 'Agriculture', © local artists – unidentified.

Figure 2: NCERT, Rimjhim, Hindi, Class 1, Chapter 2: http://ncert.nic.in/NCERTS/textbook/textbook.htm?ahhn1=2-23.

Figure 3: Credit: Vidya Bhawan Education Resource Centre, Udaipur.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.